ವಿಜಯಪುರ | ಸಂಪುಟ 04 | ಸಂಚಿಕೆ 231 | ಪುಟ 04 | ₹ 3.00

https://udayarashminews.com

udayarashmi 90088 88340

ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ

Editor: Indushekhar Manur

editor.udayarashmi@gmail.com

RNI NO: KARKAN/2023/86203

ಶನಿವಾರ, ನವೆಂಬರ್ 07, 2026

"ಕಾಂಗ್ರೆಸ್ ಪಕ್ಷವು ಈಗಾಗಲೇ ಸಿದ್ದರಾಮಯ್ಯ ಅವರಿಗೆ ಎರಡು ಬಾರಿ ಮುಖ್ಯಮಂತ್ರಿಯಾಗುವ ಅವಕಾಶ ನೀಡಿದೆ, ಹೀಗಾಗಿ ಅವರಿಗೆ ಮತ್ತೊಂದು ಹುದ್ದೆ ಅಥವಾ ಅವಕಾಶ ನೀಡುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಪಕ್ಷಕ್ಕಾಗಿ ಕೆಲಸ ಮಾಡುವುದಾಗಿ ಮತ್ತು ಮುಂದಿನ ಚುನಾವಣೆಯಲ್ಲಿ ಪಕ್ಷದ ಗೆಲುವಿಗಾಗಿ ಶ್ರಮಿಸುವುದಾಗಿ ಸ್ವತಃ ಸಿದ್ದರಾಮಯ್ಯ ಅವರೇ ಹೇಳಿದ್ದಾರೆ."



■ ಸತೀಶ್ ಜಾರಕಿಹೊಳಿ
ಲೋಕೋಪಯೋಗಿ ಸಚಿವರು

ತಮ್ಮ ಮೂರು ತಿಂಗಳ ಸಂಬಳದಲ್ಲಿ, ತಮ್ಮ ಶಾಲೆಯ ವಿದ್ಯಾರ್ಥಿಗಳನ್ನು ವಿಮಾನದ ಮೂಲಕ ಶೈಕ್ಷಣಿಕ ಪ್ರವಾಸ ಭಾಗ್ಯ ಕಲ್ಪಿಸಿಕೊಟ್ಟ ಮುಖ್ಯ ಗುರು ವಿಠ್ಠಲ ಭೈರಗೊಂಡ

ಸರ್ಕಾರಿ ಶಾಲಾ ಮಕ್ಕಳಿಗೆ ವಿಮಾನ ಪ್ರಯಾಣ ಭಾಗ್ಯ!

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ಸರ್ಕಾರಿ ಪ್ರಾಥಮಿಕ ಶಾಲಾ ಶಿಕ್ಷಕರೊಬ್ಬರು ತಮ್ಮ ಮೂರು ತಿಂಗಳ ಸಂಬಳದಲ್ಲಿ, ತಮ್ಮ ಶಾಲೆಯ ವಿದ್ಯಾರ್ಥಿಗಳನ್ನು ವಿಮಾನದ ಮೂಲಕ ಶೈಕ್ಷಣಿಕ ಪ್ರವಾಸ ಭಾಗ್ಯ ಕಲ್ಪಿಸಿಕೊಟ್ಟಿದ್ದಾರೆ.

ತಮ್ಮ ಸ್ವಂತ ಖರ್ಚಿನಲ್ಲಿ ವಿಮಾನದ ಮೂಲಕ ವಿದ್ಯಾರ್ಥಿಗಳನ್ನು ದೆಹಲಿ ಪ್ರವಾಸ ಹಮ್ಮಿಕೊಳ್ಳುವ ಮೂಲಕ ಇಡೀ ಶಿಕ್ಷಕ ಸಮುದಾಯಕ್ಕೆ ಮಾದರಿಯಾಗಿದ್ದಾರೆ. ಈ ಮೂಲಕ ಸರ್ಕಾರಿ ಶಾಲೆಗಳ ಮಕ್ಕಳಿಗೆ ವಿಮಾನ ಪ್ರಯಾಣ ಭಾಗ್ಯ ಸಿಕ್ಕಂತಾಗಿದೆ.

ವಿಜಯಪುರ ಜಿಲ್ಲೆಯ ಚಡಚಣ ತಾಲೂಕಿನ ಹಳೆ ದೂಳಖೇಡ ಸರ್ಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯ ವಿಠ್ಠಲ ಭೈರಗೊಂಡ ಇವರು ತಮ್ಮ ಸ್ವಂತ ಖರ್ಚಿನಲ್ಲಿ ಸುಮಾರು 2–3 ಲಕ್ಷರೂ. ಖರ್ಚು ಮಾಡಿ ತಮ್ಮ ಸರ್ಕಾರಿ ಶಾಲೆಯ ಮಕ್ಕಳಿಗೆ ವಿಮಾನದಲ್ಲಿ ದೆಹಲಿಗೆ ಶೈಕ್ಷಣಿಕ ಪ್ರವಾಸಕ್ಕೆ ಕರೆದುಕೊಂಡು ಹೋಗುತ್ತಿದ್ದಾರೆ. ಇಬ್ಬರು ಸಹಶಿಕ್ಷಕರೊಂದಿಗೆ ಪ್ರವಾಸಕ್ಕೆ ತೆರಳುತ್ತಿರುವ ಭೈರಗೊಂಡ ಶಿಕ್ಷಕರು, ಸರ್ಕಾರಿ ಶಾಲಾ ಮಕ್ಕಳಿಗೆ ವಿಮಾನಯಾನ ಸೌಭಾಗ್ಯದಾತಾ ಆಗಿದ್ದಾರೆ.

ನವ್ವೆಂಬರ್ 13ರಿಂದ ಪ್ರಾರಂಭವಾಗುವ ಶೈಕ್ಷಣಿಕ ಪ್ರವಾಸವೂ ದೆಹಲಿಯ ಪ್ರೇಕ್ಷಣೀಯ ಸ್ಥಳಗಳಾದ ಕುತೂಬ್ ಮಿನಾರ, ರಾಜಘಾಟ, ಕೆಂಪುಕೋಟೆ, ಇಂದಿರಾ ಪ್ಯಾಲೇಸ್, ಇಂಡಿಯಾ ಗೇಟ್ ಸೇರಿದಂತೆ ಇತರೆ ಪ್ರೇಕ್ಷಣೀಯ ಸ್ಥಳಗಳಿಗೆ ಭೇಟಿ ನೀಡಿ ಮಕ್ಕಳ ಕಲಿಕೆ ಇಮ್ಮಡಿಗೊಳಿಸಲಿದ್ದಾರೆ. ನಂತರ ದೆಹಲಿ ಸುತ್ತಮುತ್ತಲಿನ ಆಗ್ರಾದಲ್ಲಿರುವ ತಾಜಮಹಲ್, ಯಮುನಾ ನದಿ, ಪತೇಪೂರ ಸಿಕ್ರಿ, ಮಥೂರಾ ಬೃಂದಾವನ ಸೇ-ರಿದಂತೆ ಪ್ರಸಿದ್ಧ ಪ್ರವಾಸಿ ತಾಣಗಳಿಗೆ ಭೇಟಿ ನೀಡಲಿದ್ದಾರೆ. 13ರಂದು ಸೋಲಾಪೂರ ಪುಣೆ ಮಾರ್ಗವಾಗಿ ದೆಹಲಿಗೆ ತೆರಳುವ ಪ್ರವಾಸ ತಂಡ ಸುಮಾರು 4 ದಿನಗಳವರೆಗೆ ಶೈಕ್ಷಣಿಕ ಪ್ರವಾಸದಲ್ಲಿರುತ್ತಾರೆ. ಸರ್ಕಾರಿ ಶಾಲಾ ಮಕ್ಕಳಿಗೆ ವಿಮಾನ ಪ್ರಯಾಣದ ಮೂಲಕ ಶೈಕ್ಷಣಿಕ ಪ್ರವಾಸ ಮಾಡಿಸುತ್ತಿರುವ ಮಾದರಿ ಶಿಕ್ಷಕ ವಿಠ್ಠಲ ಭೈರಗೊಂಡ ಅವರ ಕಾರ್ಯ ಶ್ಲಾಘನೀಯವಾಗಿದೆ ಎಂದು ಶಾಲಾ ಸುಧಾರಣಾ ಸಮಿತಿ ಅಧ್ಯಕ್ಷರು, ಪದಾಧಿಕಾರಿಗಳು ಪಾಲಕರು, ಸಾರ್ವಜನಿಕರು ಹರ್ಷ ವ್ಯಕ್ತ ಪಡಿಸಿದ್ದಾರೆ.

"ಚಡಚಣ ತಾಲೂಕಿನ ಹಳೆ ದೂಳಖೇಡ ಶಾಲೆಯ ಮುಖ್ಯಗುರು ವಿಠ್ಠಲ ಭೈರಗೊಂಡ ತಮ್ಮ ಸ್ವಂತ ಖರ್ಚಿನಲ್ಲಿ ಸರ್ಕಾರಿ ಶಾಲಾ ಮಕ್ಕಳನ್ನು ವಿಮಾನದ ಮೂಲಕ ಶೈಕ್ಷಣಿಕ ಪ್ರವಾಸ ಮಾಡಿಸುತ್ತಿರುವುದು ಶ್ಲಾಘನೀಯ ಕಾರ್ಯವಾಗಿದೆ. ಇಡೀ ಶಿಕ್ಷಕ ಸಮುದಾಯಕ್ಕೆ ಮಾದರಿಯಾಗಿದ್ದಾರೆ. ಇಡೀ ಜಿಲ್ಲೆಯ ಶಿಕ್ಷಕರು ಇವರ ಕಾರ್ಯವನ್ನು ಮೆಚ್ಚಿಕೊಂಡಿದ್ದಾರೆ. ಇಂತಹ ಕಾರ್ಯ ಸಮಾಜದಲ್ಲಿ ಹೆಚ್ಚಾಗಬೇಕು. ಸರ್ಕಾರಿ ಶಾಲೆಗಳಸಬಲೀಕರಣಕ್ಕೆಕೈಜೋಡಿಸಬೇಕು."

■ ಹೆಚ್ ನಾಗೇಂದ್ರಪ್ಪ
ಕ್ಷೇತ್ರ ಶಿಕ್ಷಣಾಧಿಕಾರಿಗಳು, ಚಡಚಣ

"ಎಲ್ಲರಂತೆ ನಮ್ಮ ಮಕ್ಕಳಿಗೂ ವಿಮಾನದಲ್ಲಿ ಕುಳಿತು ಕೊಳ್ಳುವ ಆಶೆ ಇರುತ್ತದೆ. ಸರ್ಕಾರಿ ಶಾಲಾ ಮಕ್ಕಳಿಗೆ ಶೈಕ್ಷಣಿಕ ಪ್ರವಾಸ ಮಾಡ ಬೇಕೆಂಬ ಸದುದ್ದೇಶದಿಂದ ಈ ಕಾರ್ಯ ಕೈಕೊಂಡಿರುವೆ. ಇದಕ್ಕೆ ಸಹಶಿಕ್ಷಕರು, ಅಧಿಕಾರಿಗಳು, ಪಾಲಕರ ಅನುಮತಿ ಪಡೆಯಲಾಗಿದೆ."



■ ವಿಠ್ಠಲ ಭೈರಗೊಂಡ
ಮುಖ್ಯ ಗುರು, ಸರ್ಕಾರಿ ಪ್ರಾಥಮಿಕ ಶಾಲೆ, ಧೂಳಖೇಡ

ಮೋದಿ ವರ್ಚಸ್ಸು ಕಡಿಮೆಯಾಗುತ್ತಿದೆ । ಎಸ್‌ಆರ್ ಇಲ್ಲದಿದ್ದರೆ ಅವರಪ್ಪನಾಣೆ ಗೆಲ್ಲಲ್ಲ । ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭವಿಷ್ಯ

2029ರಲ್ಲಿ ಯಾವ ಕಾರಣಕ್ಕೂ ಬಿಜೆಪಿ ಅಧಿಕಾರಕ್ಕೆ ಬರಲ್ಲ



ಬೆಂಗಳೂರು: ದೇಶದಲ್ಲಿ ಪ್ರಧಾನಿ ಮೋದಿ ವರ್ಚಸ್ಸು ಕಡಿಮೆಯಾಗುತ್ತಿದೆ, ಎಸ್‌ಐಆರ್ ಇಲ್ಲದಿದ್ದರೆ ಅವರಪ್ಪನ ಆಣೆ ಬಿಜೆಪಿಯವರು ಗೆಲ್ಲಲಾಗಲ್ಲ. ದೇಶದಲ್ಲಿ ಎಸ್ ಐಆರ್ ವಿರುದ್ಧದ ಈ ಹೋರಾಟ ಎರಡನೇ ಸಂಗ್ರಾಮ. ಇದರಲ್ಲಿ ನಾವು ಯಶಸ್ಸು ಗಳಿಸುತ್ತೇವೆ. 2029ರಲ್ಲಿ ಯಾವ ಕಾರಣ–ಕ್ಕೂ ಬಿಜೆಪಿ ಅಧಿಕಾರಕ್ಕೆ ಬರಲ್ಲ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ.

ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಎಸ್‌ಐಆರ್ ವಿರೋಧಿಸಿ ಕಾಂಗ್ರೆಸ್ ನಡೆಸಿದ ಪ್ರತಿಭಟನೆಯಲ್ಲಿ ಭಾಗಿಯಾಗಿ ಮಾತನಾಡಿದ ಅವರು, ದೇಶಾದ್ಯಂತ ಎಜಿ–ಆರ್ ಪ್ರಕ್ರಿಯೆ ಕಾನೂನು ಪ್ರಕಾರ ನಡೆದಿಲ್ಲ. ಅದಕ್ಕಾಗಿ ಎಸ್‌ಆರ್ ರದ್ದಾಗಬೇಕು. ಸಿಇಸಿ ಜ್ಞಾನೇಶ್ ಕುಮಾರ್ ಕೂಡಲೇ ರಾಜೀನಾಮೆ ಕೊಡಬೇಕು ಎಂದು ಆಗ್ರಹಿಸಿದ್ದಾರೆ.

ಮತದಾರರ ಪಟ್ಟಿಯ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆಯು ಕಾನೂನು ಹಾಗೂ ಸಂವಿಧಾನದ ಆಶಯಗಳಿಗೆ ವಿರುದ್ಧವಾಗಿದೆ. ಈ ಪ್ರಕ್ರಿಯೆಯನ್ನು ಕೂಡಲೇ ರದ್ದುಗೊಳಿಸಬೇಕು ಮತ್ತು ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಸಿದ್ದರಾಮಯ್ಯ ಆಗ್ರಹಿಸಿದ್ದಾರೆ.

ಎಸ್‌ಐಆರ್ ರದ್ದತಿ ಮತ್ತು ಮುಖ್ಯ ಚುನಾವಣಾ ಆಯುಕ್ತರ ರಾಜೀನಾಮೆ ಎಂಬ ಎರಡು ಪ್ರಮುಖ ಬೇಡಿಕೆಗಳನ್ನು ಮುಂದಿಟ್ಟುಕೊಂಡು ದೇಶಾದ್ಯಂತ ಹೋರಾಟ ನಡೆಯುತ್ತಿದೆ. ನವೆಂಬರ್ 1ರಂದು ದೆಹಲಿಯಲ್ಲಿ ಈ ಸಂಬಂಧ ಬೃಹತ್ ಪ್ರತಿಭಟನಾ ಸಮಾವೇಶ ನಡೆದಿದ್ದು, ಕರ್ನಾಟಕದಲ್ಲಿಯೂ ಕಾಂಗ್ರೆಸ್ ಹಾಗೂ ಇಂಡಿಯಾ ಒಕ್ಕೂಟದ ಸದಸ್ಯ ಪಕ್ಷಗಳು ಹೋರಾಟವನ್ನು ಮುಂದುವರಿಸಿವೆ. ಇದು ಕೇವಲ ಮತದಾರರ ಪಟ್ಟಿಯ ಪರಿಷ್ಕರಣೆಗೆ ಸಂಬಂಧಿಸಿದ ವಿಚಾರವಲ್ಲ. ದೇಶದ ಸಂವಿಧಾನ, ಪ್ರಜಾಪ್ರಭುತ್ವ ಮತ್ತು ಮತದಾರರ ಹಕ್ಕುಗಳ ರಕ್ಷಣೆಗೆ ಸಂಬಂಧಿಸಿದ ಮಹತ್ವದ ಹೋರಾಟವಾಗಿದೆ ಎಂದು ತಿಳಿಸಿದರು.

ಚುನಾವಣಾ ವ್ಯವಸ್ಥೆಯ ಮೇಲೆ ಪ್ರಭಾವ

2024ರ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಕೇವಲ 240 ಸ್ಥಾನಗಳನ್ನು ಗೆದ್ದಿದ್ದು, ಸ್ವಂತ ಬಲದಿಂದ ಬಹುಮತ ಪಡೆಯಲು ಸಾಧ್ಯವಾಗಲಿಲ್ಲ. ಮಿತ್ರಪಕ್ಷಗಳ ಬೆಂಬಲದೊಂದಿಗೆ ಸರ್ಕಾರ ರಚಿಸಿದ ನಂತರ ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾ ವ್ಯವಸ್ಥೆಯ ಮೇಲೆ ಪ್ರಭಾವ ಬೀರುವ ಪ್ರಯತ್ನಗಳನ್ನು ಆರಂಭಿಸಿದ್ದಾರೆ. ಚುನಾವಣಾ ಆಯೋಗದ ಸ್ವಾಯತ್ತತೆಗೆ ಧಕ್ಕೆ ತರುವ ಮೂಲಕ ತಮ್ಮ ರಾಜಕೀಯ ಹಿತಾಸಕ್ತಿಗಳನ್ನು ಸಾಧಿಸಿಕೊಳ್ಳಲು ಮುಂದಾಗಿದ್ದಾರೆ ಎಂದು ಆರೋಪಿಸಿದರು.

ಜ್ಞಾನೇಶ್ ಕುಮಾರ್ ಆಯ್ಕೆ ಆಗಿದ್ದು ಹೇಗೆ ಗೊತ್ತಾ?



ಜ್ಞಾನೇಶ್ ಕುಮಾರ್ ಆಯ್ಕೆ ಆಗಿದ್ದು ಹೇಗೆ ಗೊತ್ತಾ? ಎಂದು ವಿವರಣೆ ನೀಡಿದ ಮಾಜಿ ಸಿಎಂ ಸಿದ್ದರಾಮಯ್ಯ ಅವರು, 2024ರಲ್ಲಿ ಲೋಕಸಭಾ ಚುನಾವಣೆಯಲ್ಲಿ ಎನ್.ಡಿ.ಎ 240 ಸ್ಥಾನ ಮಾತ್ರ ಗೆಲ್ತು. ಬಿಜೆಪಿಗೆ ಮೆಜಾರಿಟಿ ಬರಲಿಲ್ಲ, ಅದಕ್ಕೋಸ್ಕರ ಮೋದಿ, ಅಮಿತ್ ಶಾ ಕುತಂತ್ರ ಮಾಡಿದ್ರು. ಐಎಎಸ್ ಅಧಿಕಾರಿ ಜ್ಞಾನೇಶ್ ಕುಮಾರ್ ಇತಿಹಾಸ ಸರಿ ಇಲ್ಲ. ಜ್ಞಾನೇಶ್ ಕುಮಾರ್ ಕೇರಳದಲ್ಲಿ ಐಎಎಸ್ ಅಧಿಕಾರಿಯಾಗಿದ್ದರು. ಆಯ್ಕೆ ಸಮಿತಿಯಲ್ಲಿ ಪ್ರಧಾನಿ, ಸಿಜೆಐ, ವಿಪಕ್ಷ ನಾಯಕರು ಇರ್ತಾರೆ. ಆದರೆ ಇವರನ್ನು ಆಯ್ಕೆ ಮಾಡುವ ಮೊದಲೇ ಸಮಿತಿ ಬದಲಾಯಿಸ್ತಾರೆ. ಸಿಜೆಐ ತೆಗೆದು ಸಂಪುಟದವರನ್ನು ಸದಸ್ಯರನ್ನಾಗಿ ಮಾಡಿಕೊಳ್ಳುತ್ತಾರೆ. ಇದಕ್ಕೆ ರಾಹುಲ್ ಗಾಂಧಿ ವಿರೋಧ ಮಾಡಿದ್ದರೂ ಜ್ಞಾನೇಶ್ ಕುಮಾರ್ ಅವರನ್ನು ಆಯ್ಕೆ ಮಾಡ್ತಾರೆ. ಆಮೇಲೆ ಎಸ್‌ಐಆರ್ ಏಕಮುಖವಾಗಿ ಮಾಡುವ ಮೂಲಕ ಜ್ಞಾನೇಶ್ ಕುಮಾರ್ ಅವರನ್ನು ಬಿಜೆಪಿಯ ಕೈಗೊಂಬೆ ಮಾಡಿಕೊಳ್ತಾರೆ ಎಂದು ಸಿದ್ದರಾಮಯ್ಯ ಆರೋಪಿಸಿದ್ದಾರೆ.

ರೈತ ಮುಖಂಡರಾದ ಶಶಿಕಾಂತ ಗೂರೂಜಿ, ಚುನಪ್ಪಾ ಪೂಜಾರಿ ನೇತೃತ್ವದಲ್ಲಿ ಸಭೆ । ಪ್ರತಿಭಟನೆ ಇಂದು

ಕೃಷ್ಣಾ–ಭೀಮಾ ತೀರದ ಕಬ್ಬಿಗೂ 3600 ರೂ. ದರ ಅನ್ವಯಿಸಲು ಹಕ್ಕೊತ್ತಾಯ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಭೀಮಾ ಹಾಗೂ ಕೃಷ್ಣಾ ತೀರದಲ್ಲಿ ಬೆಳೆಯುವ ಕಬ್ಬಿಗೂ ಪ್ರತಿ ಟನ್ ಕಬ್ಬಿಗೆ 3,600 ರೂ. ಏಕರೂಪದ ದರವನ್ನು ನಿಗದಿಗೊಳಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಸಿರು ಸೇನೆ ಹಕ್ಕೊತ್ತಾಯ ಮಂಡಿಸಿದೆ.

ಬೆಳಗಾವಿಯಲ್ಲಿ ನಡೆದ ಸಭೆಯಲ್ಲಿ ನಿಗದಿಯಾಗಿರುವ 3600 ರೂ. ನೀಡುವಲ್ಲಿ ದ್ವಂದ್ವ ನೀತಿ ಅನುಸರಿಸುತ್ತಿರುವ ಹಿನ್ನಲೆಯಲ್ಲಿ ನಾಳೆ ವಿಜಯಪುರದಲ್ಲಿ ಸಭೆ ನಡೆಯಲಿದೆ. ಇದಕ್ಕೂ ಮುನ್ನ ಬೃಹತ್ ಹೋರಾಟ ಸಹ ನಡೆಯಲಿದೆ.

ರೈತರು ಹಾಗೂ ಸಕ್ಕರೆ ಕಾರ್ಖಾನೆ ಸಮಕ್ಷಮದಲ್ಲಿ ಈ ಮಹತ್ವದ ಸಭೆ ನಡೆಯಲಿದ್ದು, ಹಿರಿಯ ರೈತ ನಾಯಕರಾದ ಶಶಿಕಾಂತ ಗೂರೂಜಿ, ಚುನಪ್ಪಾ ಪೂಜಾರಿ ಸಹ ಈ ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಒಂದು ವೇಳೆ ಇಳುವರಿ ನೆಪದಲ್ಲಿ ಅನ್ಯಾಯವಾಗುವುದು ಬೇಡ, ಒಂದು ವೇಳೆ ನಾವು ಹೇಳಿದ ದರಕ್ಕೆ ವ್ಯತ್ಯಾಸವಾದರೆ ಬೆಳಗಾವಿಯ ಶ್ರೀ ಎಸ್. ನಿಜಲಿಂಗಪ್ಪ ಸಕ್ಕರೆ ಸಂಶೋಧನಾ ಕೇಂದ್ರದ ತಜ್ಞರಿಂದಲೇ ರಿಕವರಿ ಪರೀಕ್ಷೆ ನಡೆಯಲು ಸಂಘ ಒತ್ತಾಯಿಸಲಿದೆ.

ಸಂಘದ ಜಿಲ್ಲಾಧ್ಯಕ್ಷ ಸಂಗಮೇಶ ಸಗರ ಒತ್ತಾಯಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಬಾರಿ ರಿಕವರಿ ಹೆಸ–ರಿನಲ್ಲಿ ಈ ಭಾಗದ ಕಬ್ಬಿಗೆ ಏಕರೂಪದ ದರ ಪಾವತಿಯಾಗದೇ ಕೃಷ್ಣಾ, ಭೀಮಾ ತೀರದ ರೈತರಿಗೆ ಅನ್ಯಾಯವಾಗಿತ್ತು, ಈ ಬಾರಿಯೂ ಅದು ಪುನರಾವರ್ತಿತವಾಗಬಾರದು, ರಿಕವರಿ, ಸಕ್ಕರೆ 44 ರೂ. ಆಧಾರ ಹೀಗೆ ಅದು ಇದು ನೆಪ ಇಲ್ಲದೇ ಪ್ರಥಮ ಕಂತಿನಲ್ಲಿ 3500 ರೂ. ಹಾಗೂ ಎರಡನೇಯ ಕಂತಿನಲ್ಲಿ 100 ರೂ. ಕೊಡಲೇಬೇಕು ಎಂದು ಒತ್ತಾಯಿಸಿದರು.

ಈ ವಿಷಯದಲ್ಲಿ ಅನ್ಯಾಯವಾದರೆ ನಾವು ಸುಮ್ಮನೆ ಕೂರುವುದಿಲ್ಲ. ಈ ವಿಷಯವಾಗಿ ನಾವು ಹೋರಾಟಕ್ಕೆ ಸಿದ್ದ ಎಂದರು.

ಸಂಘದ ರಾಜ್ಯ ಪದಾಧಿಕಾರಿ ಶಾಂತಗೌಡ ಪಾಟೀಲ ನಡಹಳ್ಳಿ ಮಾತನಾಡಿ, ಬೆಳಗಾವಿಯಲ್ಲಿ ನಿಗದಿಯಾಗಿರುವ ದರ ನೀಡುವಲ್ಲಿ ದ್ವಂದ್ವ ನೀತಿ ಅನುಸರಿಸುತ್ತಿವೆ, ಮೊದಲನೇ ಕಂತಿನಲ್ಲಿ 3500 ರೂ. ಹಾಗೂ ಎರಡನೇಯ ಕಂತಿನಲ್ಲಿ 100 ರೂ. ಕೊಡಲೇಬೇಕು ಎಂದರು. ಕಬ್ಬು ಹಾಗೂ ಸಮಸ್ತ ರೈತರ ಬೇಡಿಕೆಗಳು ಈಡೇರಿಕೆಯಾಗಬೇಕಾದರೆ ಡಾ.ಸ್ವಾಮಿನಾಥನ್ ವರದಿ ಶಿಫಾರಸ್ಸುಗಳು ಅನುಷ್ಠಾನಗೊಳ್ಳಬೇಕಿದೆ ಎಂದರು.

ಪ್ರಮುಖರಾದ ರಾಮನಗೌಡ ಪಾಟೀಲ, ದಯಾನಂದ ಕೋಳಿ, ಮಹಾದೇವ ಬನಸೋಡೆ, ಸಂಗಪ್ಪ ಟಕ್ಕೆ, ಅಭಿಷೇಕ ಹೂಗಾರ, ಮುದಕಣ್ಣ ಹೊರ್ತಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

'ಉದಯರಶ್ಮಿ' ಸಂಪಾದಕ ಇಂದುಶೇಖರ ಮಣೂರ ಅವರನ್ನು ಸನ್ಮಾನಿಸಿದ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ವಿಜಯಪುರ ಜಿಲ್ಲಾಧ್ಯಕ್ಷ ವಿನೋದ್ ಎಂ ಖೇಡ್ ಅಭಿಮತ

ಕಡಿಮೆ ಅವಧಿಯಲ್ಲಿ ಅಧಿಕ ಓದುಗರ ಮನಗೆದ್ದ 'ಉದಯರಶ್ಮಿ'

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ನಗರದಿಂದ ಪ್ರಕಟಗೊಳ್ಳುವ "ಉದಯರಶ್ಮಿ" ದಿನಪತ್ರಿಕೆಯು ತನ್ನ ಜನಪರ – ಜೀವಪರ ಧೋರಣೆಯ ವರದಿಗಳಿಂದ ಕಡಿಮೆ ಅವಧಿಯಲ್ಲಿಯೇ ಅತ್ಯಧಿಕ ಓದುಗರ ಮನಗೆದ್ದಿದೆ ಎಂದು ಕರ್ನಾಟಕ ರಾಜ್ಯ ಅಂಗವಿಕಲರ ಹಾಗೂ ಪಾಲಕರ ಒಕ್ಕೂಟದ ವಿಜಯಪುರ ಜಿಲ್ಲಾಧ್ಯಕ್ಷ ವಿನೋದ್ ಎಂ ಖೇಡ್ ಅಭಿಪ್ರಾಯಿಸಿದರು.

ಶುಕ್ರವಾರ ನಗರದಲ್ಲಿ ಇತ್ತೀಚೆಗೆ ಕರ್ನಾಟಕ ರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾಡಳಿತದಿಂದ "ಜಿಲ್ಲಾ ರಾಜ್ಯೋತ್ಸವ" ಪುರಸ್ಕಾರ ಪಡೆದ ಪ್ರಯುಕ್ತ 'ಉದಯರಶ್ಮಿ' ದಿನಪತ್ರಿಕೆ ಸಂಪಾದಕ ಹಾಗೂ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಇಂದುಶೇಖರ ಮಣೂರ ಅವರನ್ನು ವಿಜಯಪುರ ಜಿಲ್ಲಾ ಸಂಘ –ಸಂಸ್ಥೆಗಳ ಒಕ್ಕೂಟದಿಂದ ಸನ್ಮಾನಿಸಿ ಅವರು ಮಾತನಾಡಿದರು.

ಪತ್ರಿಕಾಕ್ಷೇತ್ರದಲ್ಲಿ ತಮ್ಮದೇ ಆದ ಕೊಡುಗೆ ನೀಡಿರುವ ಇಂದುಶೇಖರ ಮಣೂರ ಅವರಿಗೆ ಜಿಲ್ಲಾಡಳಿತ ರಾಜ್ಯೋತ್ಸವ ಪ್ರಶಸ್ತಿ ನೀಡುವ ಮೂಲಕ ತನ್ನನ್ನು ತಾನು ಗೌರವಿಸಿಕೊಂಡಿದೆ ಎಂದು ಹೇಳಿದ ಅವರು, ಮಣೂರ ಅವರು ತಮ್ಮ ಪತ್ರಿಕೆಯ ಮೂಲಕ ಸಮಾಜದಲ್ಲಿ ನೊಂದವರ ಧ್ವನಿಯಾಗಿ ಮತ್ತಷ್ಟು ಕೆಲಸ ಮಾಡಲಿ ಎಂದು ವಿನೋದ ಖೇಡ ಸದಾಶಯ ವ್ಯಕ್ತಪಡಿಸಿದರು.

ಸಂಘ –ಸಂಸ್ಥೆಗಳ ಮುಖಂಡ ಹಾಗೂ ಸಂಶೋಧಕ ಲಾಯಪ್ಪ ಇಂಗಳೆ ಅವರು ಮಾತನಾಡಿ, ವಿಜಯಪುರ ಜಿಲ್ಲೆಯ ಹಿರಿಯ ಪತ್ರಕರ್ತರಾಗಿದ್ದ ಫ ಗು ಹಳಕಟ್ಟಿ, ಮೋಹರೆ ಹಣಮಂತರಾಯರು ತಮ್ಮ ಪತ್ರಿಕೆಗಳ ಮೂಲಕ ಭಾರತ ಸ್ವಾತಂತ್ರ್ಯ ಚಳುವಳಿ ಮತ್ತು ಕರ್ನಾಟಕ ಏಕೀಕರಣ–ಕ್ಕೆ ದೊಡ್ಡ ಕೊಡುಗೆ ನೀಡಿದ್ದಾರೆ, ಜಿಲ್ಲೆಯ ಜ್ವಲಂತ ಸಮಸ್ಯೆಗಳ ಕುರಿತು ತಮ್ಮ ಪತ್ರಿಕೆಯ ಮೂಲಕ ಸರಕಾರದ ಗಮನ ಸೆಳೆಯುವ ಕಾರ್ಯ ಮಾಡುತ್ತಿರುವ ಇಂದುಶೇಖರ ಮಣೂರ ಅವರ ಕಾರ್ಯ ಶ್ಲಾಘನೀಯ ಎಂದು ಹೇಳಿದರು.

ಸನ್ಮಾನಕ್ಕೆ ಪ್ರತಿಯಾಗಿ ಮಾತನಾಡಿದ ಇಂದುಶೇಖರ ಮಣೂರ ಅವರು, ಈ ಸನ್ಮಾನ ತಮ್ಮ ಜವಾಬ್ದಾರಿಯನ್ನು ಮತ್ತಷ್ಟು ಹೆಚ್ಚಿಸಿದೆ. ತಮ್ಮ ಕ್ಷೇತ್ರದಲ್ಲಿ ಇನ್ನಷ್ಟು ಉತ್ಸಾಹದಿಂದ, ಪರಿಣಾಮಕಾರಿಯಾಗಿ ಸೇವೆಗೈಯಲು ಪ್ರೇರಣೆ ನೀಡಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಗುರುಲಿಂಗಪ್ಪಗೌಡ ಪಾಟೀಲ, ಅಂಬಣ್ಣ ಗುನ್ನಾಪುರ, ಮಲ್ಲಿಕಾರ್ಜುನ ಬಿರಾದಾರ, ಅನಿಲ ಪವಾರ ಶ್ರೀನಿವಾಸ ಕೋಳಿ, ದಾದಾಪೀರ್ ಮುಲ್ಲಾ ಹಾಗೂ "ಉದಯರಶ್ಮಿ" ಪ್ರಕಾಶಕಿ ಶೈಲಾ ಮಣೂರ ಉಪಸ್ಥಿತರಿದ್ದರು.

"ಹಿಂದೆ ಹೈದ್ರಾಬಾದ್ ವಿಮೋಚನಾ ಚಳುವಳಿಯ ಹೋರಾ ಟದಲ್ಲಿ ಇಲ್ಲಿಯ ಸ್ಥಳಿಯ ಪತ್ರಿಕೆಗಳು ಮಹತ್ವದ ಪಾತ್ರ ವಹಿಸಿದ್ದವು. ವಿಜಯ ಪುರ ಜಿಲ್ಲೆಯ ಬಹುತೇಕ ಭಾಗವು ರಜಾಕರ ಹಾವಳಿ ಯಿಂದ ನಲುಗಿ ಹೋಗಿತ್ತು. ಹೀಗಿರುವಾಗ ಎಲ್ಲ ಅರ್ಹತೆಯಿದ್ದರೂ ಜಿಲ್ಲೆಯ ಜನಪ್ರತಿನಿಧಿಗಳ ಇಚ್ಛಾಶಕ್ತಿಯ ಕೊರತೆಯಿಂದಾಗಿ ಅಂದು ವಿಜಯಪುರ ಜಿಲ್ಲೆ 371 (ಜೆ) ಸೌಲಭ್ಯದಿಂದ ವಂಚಿತವಾಯಿತು. ಈಗ ಮತ್ತೆ ಈ ಹೋರಾಟಕ್ಕೆ ಚಾಲನೆ ನೀಡಿದ್ದು, ಅದು ಸಾಕಾರಗೊಳ್ಳುವವರೆಗೆ ನಾವೆಲ್ಲ ವಿರಮಿಸುವುದಿಲ್ಲ."




■ ಲಾಯಪ್ಪ ಇಂಗಳೆ
ಸಂಶೋಧಕರು, ವಿಜಯಪುರ

ಅನುದಾನ ಬಿಡುಗಡೆಯಾದರೂ ನಾಲ್ಕು ವರ್ಷಗಳಿಂದ ಡಾಂಬರೀಕರಣ ಕಾಣದ ಹೊನವಾಡಕಾಜಿಬಿಳಗಿ ರಸ್ತೆ । ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಸಾರ್ವಜನಿಕರ ಆಕ್ರೋಶ

ಧೂಳು, ಕಲ್ಲುಮಣ್ಣಿನ ರಸ್ತೆಯಲ್ಲಿ ಸಂಚಾರ ದುಸ್ತರ

■ ಉದಯರಶ್ಮಿ ದಿನಪತ್ರಿಕೆ



ಹೊನವಾಡ: ವಿಜಯಪುರ ಜಿಲ್ಲೆಯ ತಿಕೋಟಾ ತಾಲೂಕಿನ ಹೊನವಾಡದಿಂದ ಕಾಜಿಬಿಳಗಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ರಸ್ತೆ ಕಳೆದ ನಾಲ್ಕು ವರ್ಷಗಳಿಂದ ಡಾಂಬರೀಕರಣ ಕಾಣದೆ ಹದಗೆಟ್ಟಿದ್ದು, ಸಾರ್ವಜನಿಕರು ಪ್ರತಿನಿತ್ಯ ಸಂಚಾರದ ಸಂಕಷ್ಟ ಅನುಭವಿಸುವಂತಾಗಿದೆ.

ರಸ್ತೆ ಅಭಿವೃದ್ಧಿಗಾಗಿ ಅನುದಾನ ಬಿಡುಗಡೆಯಾಗಿದೆ ಎನ್ನಲಾಗುತ್ತಿದ್ದರೂ, ಇಂದಿಗೂ ಕಾಮಗಾರಿ ಪೂರ್ಣಗೊಳ್ಳದೆ ಇರುವುದು ಸಾರ್ವಜನಿಕರಲ್ಲಿ ಹಲವು ಅನುಮಾನಗಳಿಗೆ ಕಾರಣವಾಗಿದೆ. ರಸ್ತೆಯುದ್ದಕ್ಕೂ ಗುಂಡಿಗಳು, ಕಲ್ಲುಮಣ್ಣು ಹಾಗೂ ಧೂಳು ತುಂಬಿಕೊಂಡಿದ್ದು, ವಾಹನ ಸವಾರರು ಜೀವ ಕೈಯಲ್ಲಿ ಹಿಡಿದು ಸಂಚರಿಸುವ ಪರಿಸ್ಥಿತಿ ನಿರ್ಮಾಣವಾಗಿದೆ. ಅದರಲ್ಲೂ ದ್ವಿಚಕ್ರ ವಾಹನ ಸವಾರರು, ರೈತರು ಹಾಗೂ ದಿನನಿತ್ಯ ಪ್ರಯಾಣಿಸುವ ಜನರು ತೀವ್ರ ತೊಂದರೆ ಅನುಭವಿಸುತ್ತಿದ್ದಾರೆ.

ಮಳೆ ಬಂದರೆ ರಸ್ತೆಯ ಗುಂಡಿಗಳಲ್ಲಿ ನೀರು ನಿಂತು ಸಂಚಾರಕ್ಕೆ ಅಡಚಣೆಯಾಗುತ್ತದೆ. ಬೇಸಿಗೆಯಲ್ಲಿ ವಾಹನಗಳು ಸಂಚರಿಸಿದಾಗ ಧೂಳಿನ ಮೋಡ ಆವರಿಸಿ ಅಕ್ಕಪಕ್ಕದ ನಿವಾಸಿಗಳು ಹಾಗೂ ಪ್ರಯಾಣಿಕರು ಆರೋಗ್ಯದ ತೊಂದರೆ ಎದುರಿಸುವಂತಾಗಿದೆ. ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್ ಸೇರಿದಂತೆ ಅಗತ್ಯ ವಾಹನಗಳ ಸಂಚಾರಕ್ಕೂ ಈ ರಸ್ತೆ ಸಮಸ್ಯೆಯಾಗಿ ಪರಿಣಮಿಸಿದೆ.

ನಾಲ್ಕು ವರ್ಷಗಳಿಂದ ರಸ್ತೆ ಅಭಿವೃದ್ಧಿಗಾಗಿ ಕಾಯುತ್ತಿರುವ ಗ್ರಾಮಸ್ಥರ ತಾಳ್ಮೆಯನ್ನು ಪರೀಕ್ಷಿಸದೆ, ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಕೂಡಲೇ ಸ್ಥಳ ಪರಿಶೀಲನೆ ನಡೆಸಿ ಕಾಮಗಾರಿಗೆ ಚಾಲನೆ ನೀಡಬೇಕು. ಬಿಡುಗಡೆಯಾದ ಅನುದಾನದ ಬಳಕೆ ಮತ್ತು ಕಾಮಗಾರಿ ವಿಳಂಬಕ್ಕೆ ಕಾರಣವೇನು ಎಂಬುದನ್ನು ಸಾರ್ವಜನಿಕರಿಗೆ ಸ್ಪಷ್ಟಪಡಿಸಬೇಕು ಎಂಬುದು ಗ್ರಾಮಸ್ಥರ ಆಗ್ರಹವಾಗಿದೆ. ಜನರ ಪ್ರಶ್ನೆ ಒಂದೇ: ಅನುದಾನ ಬಿಡುಗಡೆಯಾಗಿದ್ದರೂ ರಸ್ತೆ ಡಾಂಬರೀಕರಣಕ್ಕೆ ಇನ್ನೆಷ್ಟು ವರ್ಷ ಕಾಯಬೇಕು? ಎಂಬುದನ್ನು ಕಾಲವೇ ಉತ್ತರಿಸಬೇಕಾಗಿದೆ.

"ಕಳೆದ ನಾಲ್ಕು ವರ್ಷಗಳಿಂದ ಈ ರಸ್ತೆಯ ಸಮಸ್ಯೆ ಮುಂದುವ–ರಿದಿದೆ. ಅನುದಾನ ಬಿಡುಗಡೆಯಾಗಿದೆ ಎಂಬ ಮಾಹಿತಿ ಇದ್ದರೂ ಕಾಮಗಾರಿ ಆರಂಭವಾಗದಿರುವುದು ಬೇಸರದ ಸಂಗತಿ. ಜನಪ್ರತಿನಿಧಿಗಳು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ನಮ್ಮ ಸಮಸ್ಯೆಯನ್ನು ಗಂಭೀರವಾಗಿ ಪರಿಗಣಿಸಿ ಕೂಡಲೇ ರಸ್ತೆ ಡಾಂಬರೀಕರಣ ಕಾಮಗಾರಿ ಕೈಗೆತ್ತಿಕೊಳ್ಳಬೇಕು" ಎಂದು ಸಾರ್ವಜನಿಕರ ಪರವಾಗಿ ಒತ್ತಾಯಿಸುತ್ತೇನೆ."

■ ಶ್ರೀಶೈಲ. ಎನ್. ಕೋರಬು

ಗೃಹಲಕ್ಷ್ಮಿ' ಹಣದಿಂದ ಕರಕುಶಲ ಉದ್ಯಮ ಕಟ್ಟಿಕೊಂಡ ಕಲಬುರಗಿಯ ಸುವರ್ಣ

ಮೊಮ್ಮಗಳಿಗೆ ಮಣಿ ತೊಟ್ಟಿಲ ಆಟಿಕೆ ಖರೀದಿಸಿ ಖುಷಿಪಟ್ಟ ಸಿಎಂ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳಲ್ಲಿ ಪ್ರಮುಖವಾದ ಗೃಹಲಕ್ಷ್ಮಿ ಯೋಜನೆಯಿಂದ ಹಲವು ಗೃಹಿಣಿಯರು ಫಲ ಪಡೆದುಕೊಂಡಿದ್ದಾರೆ. ಗೃಹಲಕ್ಷ್ಮಿ ಯೋಜನೆಯಿಂದ ಬಂದ ಹಣದಿಂದ ಗೃಹೋಪಯೋಗಿ ವಸ್ತುಗಳನ್ನು ಖರೀದಿಸಿದವ–ರಿದ್ದಾರೆ, ಇನ್ನು ಕೆಲವರು ಬೇರೆ ಕೆಲಸಗಳಿಗೆ ಬಳಸಿಕೊಂಡದ್ದೂ ಇದೆ.

ಕಲಬುರಗಿಯ ಶಿವನಗರದ ಎಂ ಎಸ್ ಸುವರ್ಣ ಅವರು ತಾವು ಕೂಡಿಟ್ಟ ಗೃಹಲಕ್ಷ್ಮಿ ಹಣದಿಂದ ತಮಗೆ ಗೊತ್ತಿರುವ ಕರಕುಶಲ ವಸ್ತುಗಳನ್ನು ತಯಾರಿಸಿ ಅದನ್ನು ಮಾರಾಟ ಮಾಡುವ ಉದ್ಯಮ ಕಂಡುಕೊಂಡು ಬದುಕು ರೂಪಿಸಿಕೊಂಡಿದ್ದಾರೆ.

ಗೃಹಲಕ್ಷ್ಮಿ ಹಣದಲ್ಲಿ ಕಸೂತಿ ವಸ್ತುಗಳು, ಮಣಿಗಳಿಂದ ತಯಾರಿಸಿದ ತೊಟ್ಟಿಲು, ಮುತ್ತಿನ ತೇನೆ, ದಂಡಿ ಮತ್ತಿತರ ಅಲಂಕಾರಿಕ ವಸ್ತುಗಳ ವ್ಯಾಪಾರ ಆರಂಭಿಸಿ ದ್ದಾರೆ. ತಮ್ಮ ಊರು, ಜಿಲ್ಲೆ, ರಾಜ್ಯದಲ್ಲಿ ಮಾತ್ರವಲ್ಲದೆ ನೆರೆಯ ಮುಂಬೈ, ಪುಣೆ, ಹೈದರಾಬಾದ್ ಮತ್ತಿತರ ನಗರಗಳಲ್ಲಿಯೂ ವ್ಯಾಪಾರವನ್ನು ವಿಸ್ತ–ರಿಸಿಕೊಂಡಿದ್ದಾರಂತೆ.

ನಾವು ಅಡಪೆಚ್ಚುಗಳ ಭಾಜಪ ಮತ್ತು ಕೈ ಪಾಳೆಯದವರೇ..?

ಚುನಾವಣಾ ಆಯೋಗದ ಮುಖ್ಯಸ್ಥರ ವಿರುದ್ಧ ಕಾಂಗ್ರೆಸ್ ಮಹಾಭಿಯೋಗದಂತಹ ಕ್ರಮಕ್ಕೆ ಮುಂದಾಗಿರುವುದರ ಹಿಂದೆ ಯಾವ ಉದ್ದೇಶವಿದೆ? ಚುನಾವಣಾ ವ್ಯವಸ್ಥೆಯ ಪಾರದರ್ಶಕತೆಯ ಬಗ್ಗೆ ಪ್ರಶ್ನೆಗಳಿದ್ದರೆ, ಅವುಗಳನ್ನು ಎತ್ತುವುದರಲ್ಲಿ ತಪ್ಪಿಲ್ಲ. ಪ್ರಜಾಪ್ರಭುತ್ವದ ಸಂಸ್ಥೆಗಳ ಕಾರ್ಯವೈಖರಿಯನ್ನು ಪ್ರಶ್ನಿಸುವುದು ವಿರೋಧ ಪಕ್ಷದ ಕರ್ತವ್ಯವೂ ಹೌದು. ಆದರೆ ಪ್ರಶ್ನೆ ಕೇಳುವವರಿಗೂ ನೈತಿಕ ಹೊಣೆಗಾರಿಕೆ ಬೇಡವೇ?

ವೀರೇಶ್ ವೀರಪ್ಪ,
ಮೈಸೂರು

■ ಉದಯರಶ್ಮಿ ದಿನಪತ್ರಿಕೆ



ಅಧಿಕಾರದ ಕುರ್ಚಿಗಾಗಿ ಕಿತ್ತಾಟ ನಡೆಸುವ ರಾಜಕೀಯ ಪಕ್ಷಗಳಿಗೆ ಜನರ ಬದುಕಿಗಿಂತ ಪ್ರತಿಷ್ಠೆಯೇ ದೊಡ್ಡದಾಯಿತೇ? ಪ್ರಜಾಪ್ರಭುತ್ವದ ಹೆಸರಿನಲ್ಲಿ ನಡೆಯುತ್ತಿರುವ ಈ ರಾಜಕೀಯ ಮೇಲಾಟದಿಂದ ಸಾಮಾನ್ಯ ಜನರಿಗೆ ಸಿಗುತ್ತಿರುವುದಾದರೂ ಏನು?

ರಾಜಕೀಯವೆಂದರೆ ಜನರ ಸೇವೆ ಎಂದು ಯಾರಾದರೂ ಇನ್ನೂ ನಂಬಿದ್ದರೆ, ಅವರು ಒಮ್ಮೆ ದೇಶದ ರಾಜಕೀಯ ಬೆಳವಣಿಗೆಗಳನ್ನು ಕಣ್ಣರಳಿಸಿ ನೋಡಬೇಕು. ಇಲ್ಲಿ ಜನರ ಸಮಸ್ಯೆಗಳಿಗಿಂತ ರಾಜಕೀಯ ಪಕ್ಷಗಳ ಪ್ರತಿಷ್ಠೆಯೇ ದೊಡ್ಡದು. ಜನರ ಬದುಕಿಗಿಂತ ನಾಯಕರ ಅಹಂಕಾರವೇ ಮುಖ್ಯ. ಸಂವಿಧಾನದ ಆಶಯಗಳಿಗಿಂತ ರಾಜಕೀಯ ಲೆಕ್ಕಾಚಾರಗಳೇ ಪ್ರಧಾನ!

ಒಂದು ಕಡೆ ಕಾಂಗ್ರೆಸ್, ಮತ್ತೊಂದು ಕಡೆ ಬಿಜೆಪಿ. ಇಬ್ಬರೂ ಪ್ರಜಾಪ್ರಭುತ್ವದ ರಕ್ಷಕರು ತಾವೇ ಎಂದು ಬೀಗುತ್ತಾರೆ. ಆದ–'ರೆ ಇವರ ವರ್ತನೆಯನ್ನು ನೋಡಿದಾಗ ಒಂದು ಪ್ರಶ್ನೆ ಮಾತ್ರ ಕಾಡುತ್ತದೆ. ನಾವು ಪ್ರಜಾಪ್ರಭುತ್ವದ ಪಾಳೆಯದವರೇ, ಇಲ್ಲವೇ ರಾಜಕೀಯ ಅಡಪೆಚ್ಚುಗಳ ಪಾಳೆಯದವರೇ?

ಚುನಾವಣಾ ಆಯೋಗದ ಮುಖ್ಯಸ್ಥರ ವಿರುದ್ಧ ಕಾಂಗ್ರೆಸ್ ಮಹಾಭಿಯೋಗದಂತಹ ಕ್ರಮಕ್ಕೆ ಮುಂದಾಗಿರುವುದರ ಹಿಂದೆ ಯಾವ ಉದ್ದೇಶವಿದೆ? ಚುನಾವಣಾ ವ್ಯವಸ್ಥೆಯ ಪಾರದರ್ಶಕತೆಯ ಬಗ್ಗೆ ಪ್ರಶ್ನೆಗಳಿದ್ದರೆ, ಅವುಗಳನ್ನು ಎತ್ತುವುದರಲ್ಲಿ ತಪ್ಪಿಲ್ಲ. ಪ್ರಜಾಪ್ರಭುತ್ವದ ಸಂಸ್ಥೆಗಳ ಕಾರ್ಯವೈಖ–ರಿಯನ್ನು ಪ್ರಶ್ನಿಸುವುದು ವಿರೋಧ ಪಕ್ಷದ ಕರ್ತವ್ಯವೂ ಹೌದು. ಆದರೆ ಪ್ರಶ್ನೆ ಕೇಳುವವರಿಗೂ ನೈತಿಕ ಹೊಣೆಗಾರಿಕೆ ಬೇಡವೇ?


ಆರೋಪ ಮಾಡುವುದಕ್ಕೂ ಆಧಾರ ಬೇಕು. ವಿರೋಧ ವ್ಯಕ್ತಪಡಿಸುವುದಕ್ಕೂ ವಿವೇಚನೆ ಬೇಕು. ದೇಶದ ಪ್ರಮುಖ ಸಾಂವಿಧಾನಿಕ ಸಂಸ್ಥೆಯ ಮುಖ್ಯಸ್ಥರ ವಿರುದ್ಧ ಗಂಭೀರ ಕ್ರಮಕ್ಕೆ ಮುಂದಾಗುವಾಗ, ಅದರ ಹಿಂದೆ ಇರುವ ಸಾಕ್ಷ್ಯಗಳೇನು? ಉದ್ದೇಶವೇನು? ರಾಜಕೀಯ ಲಾಭದ ಲೆಕ್ಕಾಚಾರವಿದೆಯೇ? ಅಥವಾ ನಿಜವಾಗಿಯೂ ಚುನಾವಣಾ ವ್ಯವಸ್ಥೆಯ ಸುಧಾರಣೆಯ ಕಾಳಜಿಯಿದೆಯೇ?

ಕಾಂಗ್ರೆಸ್ ಈ ಪ್ರಶ್ನೆಗಳಿಗೆ ಉತ್ತ–ರಿಸಬೇಕು


ಪ್ರಜಾಪ್ರಭುತ್ವದ ರಕ್ಷಣೆ ಎಂಬುದು ಕೇವಲ ರಾಜಕೀಯ ಘೋಷಣೆಯಾಗಬಾರದು. ಅದು ನಡವಳಿಕೆಯಲ್ಲೂ ಕಾಣಿಸಬೇಕು.


ಇನ್ನು ಬಿಜೆಪಿಯ ಕಡೆ ತಿರುಗಿ ನೋಡೋಣ

ಕಾಂಗ್ರೆಸ್ ದೊಡ್ಡ ಮಟ್ಟದ ಪ್ರತಿಭಟನೆ ನಡೆಸುತ್ತಿರುವ ಸಂದರ್ಭದಲ್ಲಿ ಬಿಜೆಪಿ ಅದಕ್ಕೆ ಪ್ರತಿಯಾಗಿ ಸಿಖ್ ಸಮುದಾಯದ ಸಚಿವರ ನೇತೃತ್ವದಲ್ಲಿ ಜಾತಾ ನಡೆಸುತ್ತಿದೆ ಎಂಬ ಬೆಳವಣಿಗೆಯನ್ನು ನೋಡಿದಾಗ ಮತ್ತಷ್ಟು ಪ್ರಶ್ನೆಗಳು ಎದುರಾಗುತ್ತವೆ. ಈ ಪ್ರತಿಭಟನೆಗೆ ಪ್ರತಿಯಾಗಿ ಮತ್ತೊಂದು ರಾಜಕೀಯ ಪ್ರದರ್ಶನ ನಡೆಸುವುದರಿಂದ ದೇಶಕ್ಕೆ ಆಗುವ ಲಾಭವೇನು?



ಸಿಖ್ ಸಮುದಾಯದ ಇತಿಹಾಸದಲ್ಲಿ ಗಾಯಗಳಿವೆ. ನೋವಿನ ನೆನಪುಗಳಿವೆ. 1984ರ ಸಿಖ್ ವಿರೋಧಿ ಹಿಂಸಾಚಾರವು ದೇಶದ ಇತಿಹಾಸದ ಕರಾಳ ಅಧ್ಯಾಯ. ಅಂಥ ದುರಂತವನ್ನು ಸ್ಮರಿಸುವಾಗಲೂ ಸಂತ್ರಸ್ತರ ನೋವು ರಾಜಕೀಯ ಲಾಭದ ಸಾಧನವಾಗಬಾರದು. ನ್ಯಾಯ, ಹೊಣೆಗಾರಿಕೆ ಮತ್ತು ಮಾನವೀಯತೆಯೇ ಕೇಂದ್ರವಾಗಬೇಕು.





ಆದರೆ ಒಂದು ಮಹತ್ವದ ಪ್ರಶ್ನೆ ಇದೆ. ಸಂತ್ರಸ್ತರ ಕಣ್ಣೀರನ್ನು ಒರೆಸುವುದು ರಾಜಕೀಯದ ಉದ್ದೇಶವೇ, ಅಥವಾ ಆ ಕಣ್ಣೀರನ್ನೇ ರಾಜಕೀಯದ ಆಯುಧವನ್ನಾಗಿ ಮಾಡಿಕೊಳ್ಳುವುದೇ?

ಕಾಂಗ್ರೆಸ್ ಪ್ರತಿಭಟನೆ ನಡೆಸಿದರೆ ಅದಕ್ಕೆ ಪ್ರತಿಯಾಗಿ ಬಿಜೆಪಿ ಜಾಥಾ ನಡೆಸಬೇಕೇ? ಒಂದು ಪಕ್ಷದ ರಾಜಕೀಯ ಕಾರ್ಯಕ್ರಮಕ್ಕೆ ಇನ್ನೊಂದು ಪಕ್ಷದ ರಾಜ–ಕೀಯ ಪ್ರದರ್ಶನವೇ ಉತ್ತರವಾದರೆ, ಜನರ ಸಮಸ್ಯೆಗಳಿಗೆ ಉತ್ತರಿಸುವವರು ಯಾರು?


ಇಲ್ಲಿ ಬಿಜೆಪಿಯನ್ನೂ ಪ್ರಶ್ನಿಸಲೇಬೇಕು. ಕಾಂಗ್ರೆಸ್‌ನ ಕ್ರಮದ ಬಗ್ಗೆ ನಿಮಗೆ ಆಕ್ಷೇಪವಿದ್ದರೆ, ಅದನ್ನು ಸತ್ಯಾಂಶಗಳ ಮೂಲಕ ಎದುರಿಸಿ. ನಿಮ್ಮ ಬಳಿ ದಾಖಲೆಗಳಿದ್ದರೆ ಜನರ ಮುಂದಿಡಿ. ನಿಮ್ಮ ನಿಲುವು ನ್ಯಾಯಯುತವಾಗಿದ್ದರೆ ಅದನ್ನು ತರ್ಕದ ಮೂಲಕ ಸಮರ್ಥಿಸಿಕೊಳ್ಳಿ. ಆದರೆ ರಾಜಕೀಯಕ್ಕೆ ರಾಜಕೀಯವೇ ಉತ್ತರವಾಗಬೇಕು ಎಂಬ ಹಠದಲ್ಲಿ ದೇಶದ ಜನರ ಗಮನವನ್ನು ಮೂಲ ಸಮಸ್ಯೆಗಳಿಂದ ಬೇರೆಡೆಗೆ ತಿರುಗಿಸುತ್ತಿಲ್ಲವೇ?

ಪ್ರಜಾಪ್ರಭುತ್ವವೆಂದರೆ ಪ್ರತಿಭಟನೆಗಳ ಸಂಖ್ಯೆಯನ್ನು ಹೆಚ್ಚಿಸುವುದಲ್ಲ. ಪರಸ್ಪರರ ವಿರುದ್ಧ ಘೋಷಣೆ ಕೂಗುವುದೂ ಅಲ್ಲ. ಪ್ರಜಾಪ್ರಭುತ್ವವೆಂದರೆ ಭಿನ್ನಾಭಿಪ್ರಾಯಗಳ ನಡುವೆಯೂ ಸಂವಿಧಾನದ ಮೌಲ್ಯಗಳನ್ನು ಎತ್ತಿಹಿಡಿಯುವುದು.

ಕಾಂಗ್ರೆಸ್‌ನ ಕ್ರಮವನ್ನು ಪ್ರಶ್ನಿಸುವ ಹಕ್ಕು ಬಿಜೆಪಿಗಿದೆ. ಬಿಜೆಪಿಯ ಜಾತಾವನ್ನು ಪ್ರಶ್ನಿಸುವ ಹಕ್ಕು ಕಾಂಗ್ರೆಸ್‌ಗಿದೆ. ಅದೇ ರೀತಿ, ಈ ಎರಡೂ ಪಕ್ಷಗಳ ನಡವಳಿಕೆಯನ್ನು ಪ್ರಶ್ನಿಸುವ ಹಕ್ಕು ಜನರಿಗಿದೆ.

ಆದರೆ ಈ ರಾಜಕೀಯ ಸಂಘರ್ಷಗಳ ನಡುವೆ ನಿರುದ್ಯೋಗಿ ಯುವಕನಿಗೆ ಕೆಲಸ ಸಿಕ್ಕಿದೆಯೇ? ಬೆಲೆ ಏರಿಕೆಯಿಂದ ಕಂಗಾಲಾಗಿರುವ ಕುಟುಂಬಕ್ಕೆ ನೆಮ್ಮದಿ ದೊರೆತಿದೆಯೇ? ರೈತನ ಸಂಕಷ್ಟಕ್ಕೆ ಪರಿಹಾರ ಸಿಕ್ಕಿದೆಯೇ? ಬಡವನ ಬದುಕಿನಲ್ಲಿ ಬೆಳಕು ಮೂಡಿದೆಯೇ? ಈ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?ಒಂದು ಪಕ್ಷ ಅಧಿಕಾರ ಉಳಿಸಿಕೊಳ್ಳಲು ಹೋರಾಡುತ್ತದೆ. ಇನ್ನೊಂದು ಪಕ್ಷ ಅಧಿಕಾರ ಪಡೆಯಲು ಹೋರಾಡುತ್ತದೆ. ಎರಡೂ ಪಕ್ಷಗಳು ಪ್ರಜಾಪ್ರಭುತ್ವದ ಹೆಸರನ್ನು ಬಳಸುತ್ತವೆ. ಆದರೆ ಜನರ ಬದುಕಿನಲ್ಲಿ ಬದಲಾವಣೆ ತರುವ ವಿಚಾರ ಬಂದಾಗ, ಆ ಹೋರಾಟದ ತೀವ್ರತೆ ಎಲ್ಲಿ ಹೋಗುತ್ತದೆ? ರಾಜ–ಕೀಯ ಪಕ್ಷಗಳು ನೆನಪಿಡಬೇಕು. ಜನರು ನಿಮಗೆ ಮತ ನೀಡಿರುವುದು ಪರಸ್ಪರರನ್ನು ಮಣಿಸಲು ಅಲ್ಲ; ಜನರ ಬದುಕನ್ನು ಸುಧಾರಿಸಲು.

ಕಾಂಗ್ರೆಸ್ ಆಗಲಿ, ಬಿಜೆಪಿ ಆಗಲಿ ಯಾರೂ ಪ್ರಶ್ನಾತೀತರಲ್ಲ. ಅಧಿಕಾರದಲ್ಲಿರುವವರನ್ನೂ ಪ್ರಶ್ನಿಸಬೇಕು; ವಿರೋಧ ಪಕ್ಷದಲ್ಲಿರುವವರನ್ನೂ ಪ್ರಶ್ನಿಸಬೇಕು. ಪ್ರಜಾಪ್ರಭುತ್ವದಲ್ಲಿ ಪಕ್ಷನಿಷ್ಠೆಗಿಂತ ಸತ್ಯನಿಷ್ಠೆ ದೊಡ್ಡದು.



ಕೊನೆಯದಾಗಿ ಒಂದೇ ಪ್ರಶ್ನೆ

ನಿಮ್ಮ ರಾಜಕೀಯ ಪ್ರತಿಷ್ಠೆಗಾಗಿ ದೇಶದ ಜನರ ಭಾವನೆಗಳನ್ನು ಕೆರಳಿಸುತ್ತಿದ್ದೀರಾ? ಅಥವಾ ನಿಜವಾಗಿಯೂ ಪ್ರಜಾಪ್ರಭುತ್ವವನ್ನು ಬಲಪಡಿಸಲು ಹೋರಾಡುತ್ತಿದ್ದೀರಾ?

ಜನರಿಗೆ ಬೇಕಿರುವುದು ರಾಜ–ಕೀಯ ಜಾತಾಗಳ ಸಂಖ್ಯೆಯಲ್ಲ. ಜನ–ರಿಗೆ ಬೇಕಿರುವುದು ನೆಮ್ಮದಿಯ ಬದುಕು. ಘೋಷಣೆಗಳ ಗದ್ದಲವಲ್ಲ, ಸಮಸ್ಯೆಗಳಿಗೆ ಪರಿಹಾರ. ಪರಸ್ಪರರ ಮೇಲಿನ ಆರೋಪಗಳಲ್ಲ, ಹೊಣೆಗಾರಿಕೆಯ ಆಡಳಿತ.

ಕಾಂಗ್ರೆಸ್‌ನವರೇ, ಬಿಜೆಪಿಯವರೇ... ಪ್ರಜಾಪ್ರಭುತ್ವದ ಹೆಸರಿನಲ್ಲಿ ನಿಮ್ಮ ರಾಜಕೀಯ ಮೇಲಾಟವನ್ನು ಮುಂದುವರಿಸುವ ಮೊದಲು, ದೇಶದ ಸಾಮಾನ್ಯ ಜನರಿಗೆ ನೀವು ಮಾಡಿರುವ ಒಳಿತಿನ ಲೆಕ್ಕವನ್ನೊಮ್ಮೆ ಕೊಡಿ. ಯಾಕೆಂದರೆ ಜನರು ನಿಮ್ಮ ಘೋಷಣೆಗಳನ್ನು ಕೇಳುತ್ತಿದ್ದಾರೆ. ನಿಮ್ಮ ನಡೆಗಳನ್ನು ಗಮನಿಸುತ್ತಿದ್ದಾರೆ. ಇತಿಹಾಸ ಎಲ್ಲವನ್ನೂ ದಾಖಲಿಸುತ್ತಿದೆ.

ಪ್ರಜಾಪ್ರಭುತ್ವದಲ್ಲಿ ಅಂತಿಮ ತೀರ್ಪು ನೀಡುವುದು ರಾಜಕೀಯ ಪಕ್ಷಗಳಲ್ಲ. ಜನರು!

ಪ್ರತಿಭಾ ಪುರಸ್ಕಾರ: ಅರ್ಜಿ ಆಹ್ವಾನ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವತಿಯಿಂದ 2026–27ನೇ ಸಾಲಿನ ಮೌಲಾನಾ ಅಬುಲ್ ಕಲಾಂ ಆಜಾದ್ ಪ್ರತಿಭಾ ಪುರಸ್ಕಾರಕ್ಕೆ ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. 2025–26ನೇ ಸಾಲಿನ ಎಸ್–ಎಸ್‌ಎಲ್‌ಸಿ ಮತ್ತು ಪಿಯುಸಿ ವಾರ್ಷಿಕ ಪರೀಕ್ಷೆಗಳಲ್ಲಿ ಮೊದಲ ಪ್ರಯತ್ನದಲ್ಲಿಯೇ ಶೇ.90ಕ್ಕಿಂತ ಹೆಚ್ಚು ಅಂಕ ಪಡೆದ ಮುಸ್ಲಿಂ, ಕ್ರಿಶ್ಚಿಯನ್, ಜೈನ, ಸಿಖ್, ಪಾರ್ಸಿ ಹಾಗೂ ಬೌದ್ಧ ಸಮುದಾಯದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು.

ಆಸಕ್ತರು ನ.30ರೊಳಗಾಗಿ ಆಪ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ, ವಿಜಯಪುರ ದೂ.ಸಂಖ್ಯೆ 08352–295523, ಜಿಲ್ಲಾ ಮಾಹಿತಿ ಕೇಂದ್ರ, ವಿಜಯಪುರ ದೂ.ಸಂಖ್ಯೆ 8123710766, ತಾಲ್ಲೂಕು ಮಾಹಿತಿ ಕೇಂದ್ರಗಳಾದ ಮುದ್ದೇಬಿಹಾಳ ದೂ. ಸಂಖ್ಯೆ 8722445552 ಬಸವನ ಬಾಗೇವಾಡಿ ದೂರವಾಣಿ ಸಂಖ್ಯೆ,9972340721, ಸಿಂದಗಿ 9035558609 ಹಾಗೂ ಇಂಡಿ 9900109759 ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಕಟಣೆ ತಿಳಿಸಿದೆ.

ಛಲವಾದಿ ನಾರಾಯಣಸ್ವಾಮಿ ಪ್ರಚೋದನಕಾರಿ ಹೇಳಿಕೆಗೆ ಸಂಗಾವಿ ತೀವ್ರ ಖಂಡನೆ



ಕೋಲಾರದಲ್ಲಿ ಬಿಜೆಪಿ ಪಾದಯಾತ್ರೆ ವೇಳೆ ಮಾತನಾಡಿದ ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಅವರು, ಕಾಂಗ್ರೆಸ್ ಅರಾಜಕತೆ ಸೃಷ್ಟಿಸಲು ಮುಂದಾದರೆ ಬಿಜೆಪಿ ಕಾರ್ಯಕರ್ತರು ಹಾಗೂ ಬೆಂಬಲಿಗರು ಕಾಂಗ್ರೆಸ್ ನಾಯಕರನ್ನು ತುಂಡು ತುಂಡಾಗಿ ಕತ್ತರಿಸಿ ಅರಬ್ಬಿ ಸಮುದ್ರಕ್ಕೆ ಎಸೆಯಲಿದ್ದಾರೆ ಎಂದು ನೀಡಿರುವ ಹೇಳಿಕೆಯನ್ನು ಕೆಪಿಸಿಸಿ ಸದಸ್ಯರು ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ಪರಿಶಿಷ್ಟ ಜಾತಿ ವಿಭಾಗದ ಅಧ್ಯಕ್ಷರು ಶ್ರೀ ಮಹಾಂತಪ್ಪ ಸಂಗಾವಿ ಅವರು ತೀವ್ರವಾಗಿ ಖಂಡಿಸಿದ್ದಾರೆ.

ಜವಾಬ್ದಾರಿಯುತ ಸ್ಥಾನದಲ್ಲಿರುವ ಇವರು ಇಂತಹ ಪ್ರಚೋದನಕಾರಿ ಹಾಗೂ ಹಿಂಸಾತ್ಮಕ ಹೇಳಿಕೆಗಳನ್ನು ನೀಡುವುದು ಸರಿಯಲ್ಲ. ರಾಜಕೀಯದಲ್ಲಿ ಟೀಕೆ–ಟಿಪ್ಪಣಿಗಳು ಸಹಜ, ಆದರೆ ವಿರೋಧ ಪಕ್ಷದ ನಾಯಕರಿಗೆ ಬಹಿರಂಗವಾಗಿ ಬೆದರಿಕೆ ಹಾಕುವುದು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ವಿರುದ್ಧವಾಗಿದೆ.

ಆದ್ದರಿಂದ ಛಲವಾದಿ ನಾರಾಯಣಸ್ವಾಮಿ ಅವರು ತಮ್ಮ ಹೇಳಿಕೆಯನ್ನು ಕೂಡಲೇ ಹಿಂಪಡೆದು, ಕಾಂಗ್ರೆಸ್ ಪಕ್ಷದ ನಾಯಕರು ಹಾಗೂ ಕಾರ್ಯಕರ್ತರಲ್ಲಿ ಬಹಿರಂಗವಾಗಿ ಕ್ಷಮೆಯಾಚಿಸಬೇಕು ಎಂದು ಮಹಾಂತಪ್ಪ ಸಂಗಾವಿ ಅವರು ಆಗ್ರಹಿಸಿದ್ದಾರೆ.

ರಾಜ್ಯದ ಉನ್ನತ ಶಿಕ್ಷಣ ಸಚಿವರ ಪ್ರವಾಸ


ಕಲಬುರಗಿ: .(ಕ.ವಾ)–ರಾಜ್ಯದ ಉನ್ನತ ಶಿಕ್ಷಣ ಸಚಿವರಾದ ಬಸವರಾಜ ರಾಯರಡ್ಡಿ ಅವರು ಬೆಂಗಳೂರಿನಿಂದ ವಿಮಾನದ ಮೂಲಕ ನವೆಂಬರ್ 6 ರಂದು ಶುಕ್ರವಾರ ರಾತ್ರಿ 7.10 ಗಂಟೆಗೆ ಕಲಬುರಗಿಗೆ ಆಗಮಿಸಿ ವಾಸ್ತವ್ಯ ಮಾಡುವರು.

ನವೆಂಬರ್ 7 ರಂದು ಶನಿವಾರ ಬೆಳಿಗ್ಗೆ 11 ಗಂಟೆಗೆ ಆಳಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಕಟ್ಟಡ ನಿರ್ಮಾಣ ಕಾಮಗಾರಿಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವರು. ನಂತರ ಮಧ್ಯಾಹ್ನ 2 ಗಂಟೆಗೆ ಕಲಬುರಗಿಯಲ್ಲಿ ಸಾರ್ವಜನಿಕರನ್ನು ಭೇಟಿ ಮಾಡುವರು. ನಂತರ ರಾತ್ರಿ 7.40 ಗಂಟೆಗೆ ಕಲಬುರಗಿಯಿಂದ ವಿಮಾನದ ಮೂಲಕ ಬೆಂಗಳೂರಿಗೆ ಪ್ರಯಾಣಿಸುವರು.

ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಸನ್ಮಾನ ಸಮಾರಂಭದಲ್ಲಿ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅಭಿಮತ

ಅಸ್ಪೃಶ್ಯತೆ ನಿವಾರಣೆಯಲ್ಲಿ ಪೇಜಾವರ ಶ್ರೀಗಳ ಬದ್ಧತೆ ಅಪಾರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಅಸ್ಪೃಶ್ಯತೆ ನಿವಾರಣೆ ಹಾಗೂ ಸಮಾಜದಲ್ಲಿ ಸಮಾನತೆ ಮತ್ತು ಸಾಮರಸ್ಯ ಮೂಡಿಸುವ ಕಾರ್ಯದಲ್ಲಿ ಪೇಜಾವರ ಶ್ರೀಗಳು ಸದಾ ಮುಂಚೂಣಿಯಲ್ಲಿದ್ದಾರೆ ಎಂದು ನಗರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಹೇಳಿದರು.

ನಗರದ ಶ್ರೀಕೃಷ್ಣ–ವಾದಿರಾಜ ಮಠದಲ್ಲಿ ಉಡುಪಿ ಪೇಜಾವರ ಮಠದ ಪೂಜ್ಯ ಶ್ರೀ ವಿಶ್ವಪ್ರಸನ್ನತೀಥ–'ರ್ ಸ್ವಾಮೀಜಿಯವರಿಗೆ ವಿಜಯಪುರ ನಗರದ ಸಮಸ್ತ ಭಕ್ತಾದಿಗಳ ವತಿಯಿಂದ ಹಮ್ಮಿಕೊಂಡಿದ್ದ ಗೌರವ ಸನ್ಮಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣ ಮಾಡಬೇಕೆಂಬುದು ಶ್ರೀ ವಿಶ್ವೇಶತೀರ್ಥ ಸ್ವಾಮೀಜಿಯವರ ಕನಸಾಗಿತ್ತು. ಇಂದು ಆ ಕನಸು ನನಸಾಗಿದೆ. ಪ್ರಸ್ತುತ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ಶ್ರೀರಾಮ ಮಂದಿರ ಟ್ರಸ್ಟ್‌ನ ಧರ್ಮದರ್ಶಿಗಳಾಗಿ ಶ್ರದ್ಧಾ–ಭಕ್ತಿಯಿಂದ ಪೂಜಾ ಕೈಂಕರ್ಯಗಳನ್ನು ಮುನ್ನಡೆಸುತ್ತಿರುವುದು ಹೆಮ್ಮೆಯ ಸಂಗತಿ ಎಂದರು.

ಪ್ರಸ್ತುತ ಶ್ರೀಗಳು ಆಧುನಿಕ ವಿದ್ಯಾರ್ಥಿ ನಿಲಯ ನಿರ್ಮಾಣಕ್ಕೆ ಸಂಕಲ್ಪ ಮಾಡಿದ್ದು, ಸುಮಾರು 7 ಕೋಟಿ ರೂ. ವೆಚ್ಚದ ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ. ಈ ಕಾರ್ಯಕ್ಕೆ ಹೆಚ್ಚಿನ ಅನುದಾನ ಹಾಗೂ ದೇಣಿಗೆ ಕೊಡಿಸುವ ಮೂಲಕ ಸಂಪೂರ್ಣ ಸಹಕಾರ ನೀಡುವುದಾಗಿ ಭರವಸೆ ನೀಡಿದರು.

ಪೇಜಾವರ ಶ್ರೀ

ಬಳಿಕ ಆಶೀರ್ವಚನ ನೀಡಿದ ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು, ನ್ಯಾಯದ ಪರವಾಗಿ ಗಟ್ಟಿಯಾಗಿ ನಿಲ್ಲುವ ಗುಣ ಬಸನಗೌಡ ಪಾಟೀಲ ಯತ್ನಾಳ ಅವರಲ್ಲಿದೆ. ಅವರು ಸದಾ ಜನಪರವಾಗಿ ಧ್ವನಿ ಎತ್ತುತ್ತಾರೆ. ನ್ಯಾಯದ ಪರವಾದ ಅವರ ಗಟ್ಟಿತನಕ್ಕೆ ಬೆಂಬಲ ದೊರೆಯುತ್ತದೆ ಎಂದರು.

1964ರಲ್ಲಿಯೇ ವಿಜಯಪುರದಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪನೆಯಾಗಿದ್ದು, ತಾವು ಜನ್ಮವೆತ್ತಿದ ವರ್ಷವೂ ಅದೇ ಆಗಿದೆ ಎಂದು ಸ್ಮರಿಸಿದರು. ಹಿಂದಿನ ಗುರುಗಳು ದೂರದೃಷ್ಟಿಯಿಂದ ಈ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿ ಬಡ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಶಿಕ್ಷಣ ಪಡೆಯಲು ನೆರವಾಗಿದ್ದರು. ಇದೀಗ ಅದನ್ನು ಆಧುನಿಕ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಲು 7 ಕೋಟಿ ರೂ. ವೆಚ್ಚದ ನೂತನ ಕಟ್ಟಡ ನಿರ್ಮಾಣ ಆರಂಭಿಸಲಾಗಿದೆ. ವಿಜಯಪುರದ ಜನತೆ ತನು, ಮನ, ಧನದಿಂದ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಶ್ರೀಮಠವು ಜನರಲ್ಲಿ ಶ್ರದ್ಧೆ, ಭಕ್ತಿ ಹಾಗೂ ಉತ್ತಮ ಸಂಸ್ಕಾರ ಬೆಳೆಸುವ ನಿಟ್ಟಿನಲ್ಲಿ ಹಲವು ಯೋಜನೆಗಳನ್ನು ರೂಪಿಸಿದೆ ಎಂದರು.

ಶ್ರೀಮಠದ ವಿಜಯಪುರ ಶಾಖೆಯ ಗೌರವಾಧ್ಯಕ್ಷ ಗೋಪಾಲ ನಾಯಕ ಮಾತನಾಡಿ, ದೇಶಾದ್ಯಂತ ಪೇಜಾವರ ಮಠದ ಶಾಖೆಗಳು ಕಾರ್ಯನಿರ್ವಹಿಸುತ್ತಿದ್ದು, ಸಮಸ್ತ ಹಿಂದೂ ಸಮಾಜಕ್ಕೆ ವಿವಿಧ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಉತ್ತಮ ಸಂಸ್ಕೃತಿ ಮತ್ತು ಸಂಪ್ರದಾಯಗಳನ್ನು ಬೆಳೆಸುವಲ್ಲಿ ಶ್ರೀಮಠದ ಯತಿಗಳ ಕೊಡುಗೆ ಅಪಾರವಾಗಿದೆ ಎಂದರು.

ವಿಜಯಪುರ ಜಿಲ್ಲೆಗೂ ಶ್ರೀಮಠಕ್ಕೂ ಅವಿನಾಭಾವ ಸಂಬಂಧವಿದೆ. ಹಿಂದಿನ ಗುರುಗಳು ಜಿಲ್ಲೆಯನ್ನು ದತ್ತು ಪಡೆದು ಬರಗಾಲದ ಸಂದರ್ಭದಲ್ಲಿ ಗಂಜಿ ಕೇಂದ್ರಗಳನ್ನು ಪ್ರಾರಂಭಿಸಿಸರ್ಕಾರದೊಂದಿಗೆಕೈಜೋಡಿಸಿದ್ದರು.2031ರಲ್ಲಿ ಅವರ ಜನ್ಮ ಶತಮಾನೋತ್ಸವ ಆಚರಿಸಲಾಗುತ್ತಿದ್ದು, ಅವರ ಕನಸುಗಳನ್ನು ನನಸು ಮಾಡಲು ಶ್ರೀ ವಿಶ್ವಪ್ರಸನ್ನತೀರ್ಥ ಸ್ವಾಮೀಜಿಯವರು ಸಂಕಲ್ಪ ಮಾಡಿದ್ದಾರೆ. ಅದರಲ್ಲಿ ವಿಜಯಪುರದ ಅಖಿಲ ಭಾರತ ಮಧ್ವ ಮಹಾಮಂಡಳದ ವಿದ್ಯಾರ್ಥಿ ನಿಲಯವೂ ಪ್ರಮುಖವಾಗಿದೆ. ಈ ಸಂಕಲ್ಪಕ್ಕೆ ಸಮಿತಿ ಸಂಪೂರ್ಣ ಬೆಂಬಲವಾಗಿ ನಿಂತಿದೆ ಎಂದರು.

ಕಾರ್ಯದರ್ಶಿ ಪ್ರಕಾಶ ಅಕ್ಕಲಕೋಟ ಸ್ವಾಗತಿಸಿ ಮಾತನಾಡಿ, ವಿದ್ಯಾರ್ಥಿ ನಿಲಯದ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದೆ. ಕಟ್ಟಡ ಪೂರ್ಣಗೊಳಿಸಲು ಭಕ್ತಾದಿಗಳು ದೇಣಿಗೆ ನೀಡುವ ಮೂಲಕ ಸಹಕರಿಸುತ್ತಿರುವುದು ಸಂತಸದ ಸಂಗತಿಯಾಗಿದೆ. ದಾನಿಗಳು ನೀಡುವ ಪ್ರತಿಯೊಂದು ರೂಪಾಯಿಯೂ ಬಡ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ನೆರವಾಗಲಿದೆ ಎಂದರು.

ನವದೆಹಲಿಯಲ್ಲಿಚಾತುರ್ಮಾಸ್ಯವ್ರತಪೂರ್ಣಗೊಳಿಸಿ ವಿಜಯಪುರಕ್ಕೆ ಆಗಮಿಸಿದ ಶ್ರೀಗಳನ್ನು ಸಮಸ್ತ ಭಕ್ತಾದಿಗಳ ಪರವಾಗಿ ಗೌರವಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ವಿಕಾಸ ಪದಕಿ ವಂದಿಸಿದರು. ಶ್ರೀಧರ ಜೋಶಿ ನಿರೂಪಿಸಿದರು.

ವೇದಿಕೆಯಲ್ಲಿ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿ ಸತೀಶ್ಚಂದ್ರ ಕುಲಕರ್ಣಿ, ಅಖಿಲ ಭಾರತ ಮಧ್ವ ಮಹಾಮಂಡಳದ ಕಾರ್ಯದರ್ಶಿ ಶ್ರೀಪಾದ ಸಿಂಗನಮಲ್ಲಿ, ಸಮಿತಿ ಪದಾಧಿಕಾರಿಗಳಾದ ಡಾ. ಮಲಘಾಣ, ಡಾ. ಮಂಗಲಗಿ, ವಿ.ಸಿ. ಕುಲಕರ್ಣಿ, ವಿ.ಬಿ. ಕುಲಕರ್ಣಿ, ಅಶೋಕರಾವ್, ಮೋಹನ ಕೌತಾಳ, ಪಂ. ವಾಸುದೇವಾಚಾರ್ಯ ಸೇರಿದಂತೆ ವಿಜಯ್ ಜೋಶಿ ಉಪಸ್ಥಿತರಿದ್ದರು. ಕೊನೆಯಲ್ಲಿ ಶ್ರೀಗಳಿಂದ ತೊಟ್ಟಿಲು ಪೂಜೆ ನೆರವೇರಿತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.



ವಿಜಯಪುರದಲ್ಲ ಗುಂಡಿನ ದಾಳಿ: ವ್ಯಕ್ತಿಯ ಬರ್ಬರ ಹತ್ಯೆ!

■ ಉದಯರಶ್ಮಿ ದಿನಪತ್ರಿಕೆ

ಹೆಂಡತಿಯೊಂದಿಗೆ ಸ್ಕೂಟಿಯಲ್ಲಿ ತೆರಳುತ್ತಿದ್ದ ವ್ಯಕ್ತಿಯ ಮೇಲೆ ಫೈ-ರಿಂಗ್ । ಸ್ಥಳದಲ್ಲೇ ಎರಡು ಗುಂಡುಗಳು ಪತ್ತೆ

ವಿಜಯಪುರ: ನಗರದಲ್ಲಿ ಹಾಡಹಗಲೇ ಗುಂಡಿನ ದಾಳಿ ನಡೆದಿದ್ದು, ವ್ಯಕ್ತಿಯೊಬ್ಬರನ್ನು ಗುಂಡಿಕ್ಕಿ ಬರ್ಬರವಾಗಿ ಹತ್ಯೆ ಮಾಡಿರುವ ಘಟನೆ ತೀವ್ರ ಆತಂಕಕ್ಕೆ ಕಾರಣವಾಗಿದೆ.

ನಗರದ ಅಫ್ಜಲ್‌ಪುರ ಟಕ್ಕೆ ನಿವಾಸಿ ಯಾಸೀನ್ ಎಂಬುವವರು ತಮ್ಮ ಪತ್ನಿಯೊಂದಿಗೆ ಸ್ಕೂಟಿಯಲ್ಲಿ ತೆರಳುತ್ತಿದ್ದ ವೇಳೆ ದುಷ್ಕರ್ಮಿಗಳು ಏಕಾಏಕಿ ಗುಂಡಿನ ದಾಳಿ ನಡೆಸಿದ್ದಾರೆ. ಪತ್ನಿಯ ಮುಂದೆಯೇ ಫೈರಿಂಗ್ ನಡೆಸಿದ ದುಷ್ಕರ್ಮಿಗಳು ಕೃತ್ಯ ಎಸಗಿ ಸ್ಥಳದಿಂದ ಪರಾರಿಯಾಗಿದ್ದಾರೆ.

ಗುಂಡಿನ ದಾಳಿಯಿಂದ ಗಂಭೀರವಾಗಿ ಗಾಯಗೊಂಡ ಯಾಸೀನ್ ಸ್ಥಳದಲ್ಲೇ ಮೃತಪಟ್ಟಿದ್ದಾರೆ ಎನ್ನಲಾಗಿದೆ. ಬಳಿಕ ಮೃತದೇಹವನ್ನು ವಿಜಯಪುರದ ಸರ್ಕಾರಿ ಆಸ್ಪತ್ರೆಗೆ ರವಾನಿಸಲಾಗಿದೆ.

ಘಟನಾ ಸ್ಥಳದಲ್ಲಿ ಎರಡು ಗುಂಡುಗಳು ಪತ್ತೆಯಾಗಿದ್ದು, ದುಷ್ಕರ್ಮಿಗಳು ಎರಡು ಸುತ್ತು ಗುಂಡು ಹಾರಿಸಿರುವ ಶಂಕೆ ವ್ಯಕ್ತವಾಗಿದೆ.

ವಿಷಯ ತಿಳಿಯುತ್ತಿದ್ದಂತೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಗಾಂಧಿಚೌಕ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಘಟನೆ ನಡೆದಿದ್ದು, ಪೊಲೀಸರು ಪ್ರಕರಣದ ಕುರಿತು ತನಿಖೆ ಕೈಗೊಂಡಿದ್ದಾರೆ. ಹತ್ಯೆಗೆ ನಿಖರ ಕಾರಣವೇನು ಮತ್ತು ಆರೋಪಿಗಳು ಯಾರು ಎಂಬುದು ತನಿಖೆಯಿಂದ ತಿಳಿದುಬರಬೇಕಿದೆ.

ಕನೇರಿ ಶ್ರೀಗಳ ವಿರುದ್ಧ ಪಾಟೀಲ ಟೀಕಾ ಪ್ರಹಾರ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರದಲ್ಲಿ ಅಹಿಂದ ಹಾಗೂ ವಿವಿಧ ಪ್ರಗತಿಪರ ಸಂಘಟನೆಗಳ ಪ್ರಮುಖರಿಂದ ಪತ್ರಿಕಾಗೋಷ್ಠಿ

ವಿಜಯಪುರ: ಕನೇರಿ ಮಠದ ಗುರುಗಳು ತಮ್ಮ ಪೂರ್ವಾಶ್ರಮದ ಕೆಟ್ಟ ವರ್ತನೆಯನ್ನು ಇನ್ನೂ ಬಿಟ್ಟಿಲ್ಲ, ಹೀಗಾಗಿ ಅವರಿಗೆ ಶ್ರೇಷ್ಠರಾದ ಅದೃಶ್ಯ ಕಾಡಸಿದ್ದೇಶ್ವರ ಹೆಸರಿನಿಂದ ನಾನು ಕರೆಯಲು ಬಯಸುವುದಿಲ್ಲ, ಕೆಲವು ಶಕ್ತಿಗಳು ಕನೇರಿ ಸ್ವಾಮೀಜಿಯವರನ್ನು ಟಿಷ್ಯೂ ಪೇಪರ್ ಆಗಿ ಬಳಕೆ ಮಾಡಿ ಬಿಸಾಡುತ್ತವೆ ಎಂದು ಏಕವಚನದಲ್ಲಿಯೇ ಶ್ರೀಗಳ ಪೂರ್ವಾಶ್ರಮದ ನಾಮ ಪ್ರಯೋಗಿಸಿ ಚಿಂತಕ ಪ್ರೊ. ಜೆ.ಎಸ್. ಪಾಟೀಲ ಟೀಕಾ ಪ್ರಹಾರ ನಡೆಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು,

ನಕಲಿ ಸ್ವಾಮೀಜಿಯಾದ ಕನೇರಿ ಶ್ರೀ ಪೂರ್ವಾಶ್ರಮದ ವರ್ತನೆ ಬಿಟ್ಟಿಲ್ಲ, ಕನೇರಿ ಶ್ರೀಗಳು ಬದಲಿಗೆ ಬಾಪುಗೌಡ ಮೇಟಿ ಎಂದೇ ಕರೆಯಬೇಕಿದೆ, ಭಾವೈಕ್ಯತೆಯ ಪರಂಪರೆಯ ಮಠದಲ್ಲಿ ಅವರು ಇರಲು ಯೋಗ್ಯರಲ್ಲ, ಲಿಂಗಾಯತ ಪರಂಪರೆಯ ಮಠವನ್ನು ಬಿಡಬೇಕು. ಇಲ್ಲವಾದರೆ, ಭಕ್ತರೇ ಮಠದಿಂದ ಹೊರಹಾಕುವ ಪರಿಸ್ಥಿತಿ ಬರಲಿದೆ, ಕಾವಿ ಧರಿಸಿರುವ ಈ ನಕಲಿ ಸ್ವಾಮಿ ಲಿಂಗಾಯತ ಐಡೆಂಟಿಟಿ ನಾಶ ಮಾಡಲು ಸುಪಾರಿ ಪಡೆದಿದ್ದಾರೆ. ಯಾರದ್ದೊ ಕೈಗೊಂಬೆಯಾಗಿ ಕರ್ನಾಟಕಕ್ಕೆ ಬಂದಿದ್ದಾರೆ. ಮನುಸ್ಮೃತಿ ಹಾಗೂ ವಚನಗಳ ಬಗ್ಗೆಯೂ ಗೊತ್ತಿಲ್ಲ. ಈತನ ಬಗ್ಗೆ ತನಿಖೆ ನಡೆಸಿದರೆ ಕ್ರಿಮಿನಲ್ ಹಿನ್ನೆಲೆ ತೆರೆದುಕೊಳ್ಳಲಿದೆ.

ಜಾತಿ ಬೇಧ ಹಾಗೂ

ಇವರ ಯಾವ ಕಾಯಕ ಮಾಡುತ್ತೇನೆ ಗೊತ್ತಿಲ್ಲ, ಕೋಟಿ ಕೋಟಿ ಬೆಲೆಬಾಳುವ ಕಾರು ಯಾವ ಕಾಯಕ ಮಾಡಿ ಸಂಪಾದಿಸಿದ್ದಾರೆ ಎಂದು ಪ್ರಶ್ನಿಸಿದರು.

ಏಕ ವಚನದಲ್ಲಿಯೇ ಶ್ರೀಗಳ ವಿರುದ್ಧ ವಾಗ್ದಾಳಿ ನಡೆಸಿದ ದಲಿತ ಮುಖಂಡ ಅಡಿವೆಪ್ಪ ಸಾಲಗಲ್ ಮಾತನಾಡಿ, ಸಂವಿಧಾನದಲ್ಲಿ ಮನುಸ್ಮೃತಿಯ ಯಾವ ಅಂಶಗಳು ಇವೆ?, ಡಾ.ಅಂಬೇಡ್ಕರ್ ಬಗ್ಗೆ ನಿಮಗೆ ಯಾವುದೇ ಜ್ಞಾನ ಇಲ್ಲ, ಇನ್ಮುಂದೆ ಹಗುರುವಾಗಿ ಮಾತನಾಡಿದರೆ ಕನೇರಿ ಮಠಕ್ಕೆ ಬಂದು ನಿಮಗೆ ಮುತ್ತಿಗೆ ಹಾಕಬೇಕಾಗುತ್ತದೆ ಎಂದರು.

ಡಾ.ರವಿಕುಮಾರ ಬಿರಾದಾರ ಮಾತನಾಡಿ, ಶ್ರೀಗಳ ಪೂರ್ವಾಶ್ರಮ ಹೆಸರು ಉಲ್ಲೇಖಿಸಿ ವಾಗ್ದಾಳಿ ನಡೆಸಿ, ಬಾಪುಗೌಡ ಮೇಟಿ ತಾವು ಮಾತನಾಡುತ್ತಿಲ್ಲ, ಆರ್. ಎಸ್. ಎಸ್, ಬಿಜೆಪಿ ಮಾತನಾಡಿಸುತ್ತಿದ್ದಾರೆ, ಲಿಂಗಾಯತ ಮಠದಲ್ಲಿ ಜನಿವಾರ ಹಾಕಿಸುವ ಕೆಲಸ ಮಾಡಿದ್ದಾರೆ, ಬಸವಾದಿ ಶರಣರ ನಂತರ ಡಾ.ಅಂಬೇಡ್ಕರ್ ಅವರ ಬಗ್ಗೆ ಮಾತನಾಡಲು ಶುರು ಮಾಡಿದ್ದಾರೆ, ಸುಪ್ರೀಂ ಕೋರ್ಟ್‌ನಿಂದ ಅನಾಗರಿಕ ಎಂದು ಕರೆಸಿಕೊಂಡ ಇವನ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದರು.

ದಲಿತಮುಖಂಡ ಚನ್ನು ಕಟ್ಟಿಮನಿ ಮಾತನಾಡಿ, ಅಪಾರ ಜ್ಞಾನಿಯಾಗಿದ್ದ ಡಾ.ಅಂಬೇಡ್ಕರ್ ಮನುಸ್ಮೃತಿಯನ್ನು ಅರಿತು ಅದನ್ನು ಸುಟ್ಟು ಹಾಕಿದ್ದರು. ಹಿಂದುತ್ವಕ್ಕೆ ಪೆಟ್ಟು ಕೊಟ್ಟವರು ಎಂ.ಬಿ. ಪಾಟೀಲರು. ಹೀಗಾಗಿ ಎಂ.ಬಿ.ಪಾಟೀಲರ ಬಗ್ಗೆ ಅಪಪ್ರಚಾರ ಮಾಡಲಾಗುತ್ತದೆ ಎಂದರು.

ಬಹಿರಂಗ ಚರ್ಚೆಗೆ ಬನ್ನಿ ಅಹಿಂದ ಮುಖಂಡ ಎಂ.ಎಸ್. ಪಾಟೀಲ ಗಣಿಹಾರ ಮಾತನಾಡಿ, ಸಂವಿಧಾನದಲ್ಲಿ ಮನುಸ್ಮೃತಿ ಅಂಶಗಳು ಇವೆ ಎಂದು ಕನೇರಿ ಶ್ರೀಗಳ ಹೇಳಿಕೆ ಖಂಡನೀಯ, ಸಂವಿಧಾನದಲ್ಲಿ ಮನುಸ್ಮೃತಿ ಇರುವ ಬಗ್ಗೆ ಬಹಿರಂಗ ಚರ್ಚೆ ಬರಲಿ. ಇಲ್ಲವಾದರೆ ಕ್ಷಮೆಯಾಚನೆ ಮಾಡಲಿ ಎಂದು ಸವಾಲು ಹಾಕಿದರು.

ಸಂವಿಧಾನವು ಸಮಸಮಾಜಕ್ಕಾಗಿ ಇದೆ. ಸಮಾನವಾದ ಅವಕಾಶಗಳನ್ನು ಕಲ್ಪಿಸಲಿದೆ ಸಂವಿಧಾನದಲ್ಲಿ ಮನುಸ್ಮೃತಿ ಇದೆ ಎಂದು ಜನರಲ್ಲಿ ಗೊಂದಲ ಸೃಷ್ಟಿಸುತ್ತಿದ್ದಾರೆ. ಸ್ವಾಮೀ–ಜಿಗಳಾಗಿ ಮಾಡಬೇಕಾದ ಕೆಲಸದ ಬದಲಿಗೆ ಬೇರೆಯದ್ದೆ ಕೆಲಸದಲ್ಲಿ ತೊಡಗಿದ್ದಾರೆ.

ಕನೇರಿ ಸ್ವಾಮೀಜಿಗಳೇ, ಸಚಿವ ಎಂಬಿಪಿ ಅವರ ಜೊತೆ ಹತ್ತು ನಿಮಿಷ ಕುಳಿತು ಚರ್ಚೆ ಮಾಡಿ, ನೀವೇ ಪರಿವರ್ತನೆಯಾಗುತ್ತೀರೀ....ಅಷ್ಟೊಂದು ಆಳವಾಗಿ ಅಧ್ಯಯನ ಮಾಡಿದ್ದಾರೆ, ನೀವು ಎಳ್ಳಷ್ಟೂ ಅಧ್ಯಯನ ಮಾಡಿಲ್ಲ ಎಂದರು.

ಮುಖಂಡರಾದ ನಾಗರಾಜ ಲಂಬು, ರಾಜು ತೊರವಿ ಮೊದಲಾದವರು ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.



ರೈತ ನಾಯಕರ ಬಂಧನಕ್ಕೆ ವಿರೋಧ: ಹೆದ್ದಾರಿ ತಡೆದು ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ಕೊಲ್ಹಾರ: ಕಬ್ಬಿನ ದರ ನಿಗದಿ ಹೋರಾಟದ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯಾಧ್ಯಕ್ಷ ಚೂನಪ್ಪ ಪೂಜಾರಿ ಹಾಗೂ ಗೌರವಾಧ್ಯಕ್ಷ ಶಶಿಕಾಂತ ಗುರೂಜಿ ಸೇರಿದಂತೆ ಹಲವು ರೈತರನ್ನು ಪೊಲೀಸರು ವಶಕ್ಕೆ ಪಡೆದಿರುವುದನ್ನು ಖಂಡಿಸಿ ಕೊಲ್ಹಾರ ಪಟ್ಟಣ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಯುಕೆಪಿ ಕ್ರಾಸ್ ಸಮೀಪದ ಕೊರಿಮ್ಮಾದೇವಿ ದೇವಸ್ಥಾನದ ಬಳಿ ಗುರುವಾರ ರಾಷ್ಟ್ರೀಯ ಹೆದ್ದಾರಿ–52ರಲ್ಲಿ ಕೆಲಕಾಲ ರಸ್ತೆ ತಡೆ ನಡೆಸಿ ಪ್ರತಿಭಟನೆ ಮಾಡಿದರು.

ಕಬ್ಬಿಗೆ ಸೂಕ್ತ ಬೆಲೆ ನಿಗದಿಪಡಿಸಬೇಕು, ರೈತರ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಬೇಕು ಹಾಗೂ ಬಂಧಿಸಿರುವ ರೈತ ಮುಖಂಡರನ್ನು ತಕ್ಷಣ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿ ಪ್ರತಿಭಟನಾಕಾರರು ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿದರು. ರೈತರ ಹೋರಾಟವನ್ನು ಹತ್ತಿಕ್ಕುವ ಪ್ರಯತ್ನ ಮಾಡಬಾರದು. ರೈತರ ಸಮಸ್ಯೆಗಳಿಗೆ ಸ್ಪಂದಿಸುವ ಬದಲು ನಾಯಕರನ್ನು ಬಂಧಿಸುವ ಮೂಲಕ ಹೋರಾಟವನ್ನು ಹತ್ತಿಕ್ಕಲು ಮುಂದಾಗಿರುವುದು ಖಂಡನೀಯ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಂಚಾರ ಅಸ್ತವ್ಯಸ್ತ ರೈತರು ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದ್ದರಿಂದ ಹೆದ್ದಾರಿಯಲ್ಲಿ ವಾಹನ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡಿತು. ಹೆದ್ದಾರಿಯ ಎರಡೂ ಬದಿಗಳಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಪ್ರಯಾಣಿಕರು ಕೆಲಕಾಲ ಪರದಾಡುವಂತಾಯಿತು.

ಸ್ಥಳಕ್ಕೆ ಆಗಮಿಸಿದ ಕೊಲ್ಹಾರ ಪೊಲೀಸ್ ಠಾಣೆಯ ಪಿಎಸ್ ಅಶೋಕ ನಾಯಕ ಹಾಗೂ ಪೊಲೀಸ್ ಸಿಬ್ಬಂದಿ ಪರಿಸ್ಥಿತಿ ನಿಯಂತ್ರಿಸಿದರು.

ಕೃಷ್ಣಾ ನದಿ ನೀರು ಭೀಮಾ ನದಿಗೆ ತಿರುಗಿಸುವ ಯೋಜನೆ । ಬಿಜೆಪಿ ವಿಜಯಪುರ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಆಗ್ರಹ

ಮಾಹಿತಿ ಇರದ ಸಿಎಂ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಲಿ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಮಹಾಬಲೇಶ್ವರ ಸಮೀಪ ಕೃಷ್ಣಾ ನದಿಯಿಂದ 40 ಟಿಎಂಸಿ ಅಡಿ ಪ್ರವಾಹದ ನೀರನ್ನು ಭೀಮಾ ನದಿಯ ಉಜನಿ ಜಲಾಶಯಕ್ಕೆ ವರ್ಗಾಯಿಸುವ ಯೋಜನೆ ಬಗ್ಗೆ ರಾಜ್ಯ ಸರ್ಕಾರಕ್ಕೆ ಗಮನಕ್ಕೆ ಇರದಿರುವುದು ನೋಡಿದರೆ ಸರ್ಕಾರದ ಬೇಜವಾಬ್ದಾರಿ ಹಾಗೂ ಗುಪ್ತಚರ ಇಲಾಖೆಯ ವೈಫಲ್ಯಕ್ಕೆ ಇದು ಸಾಕ್ಷಿ, ಈ ಮಹತ್ವದ ವಿಚಾರ ವಿಡಿಯೋ ಮೂಲಕ ಸರ್ಕಾರಕ್ಕೆ ತಿಳಿಯಬೇಕೆ ಎಂದು ಗಂಭೀರವಾಗಿ ಪ್ರಶ್ನಿಸಿರುವ ಬಿಜೆಪಿ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಈ ವಿಷಯವಾಗಿ

ನಿರ್ಲಕ್ಷ್ಯ ತೋರಿದ ಹಿನ್ನೆಲೆಯಲ್ಲಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೈತಿಕ ಹೊಣೆ ಹೊತ್ತು ರಾಜಿನಾಮೆ ನೀಡಬೇಕು ಎಂದು ಒತ್ತಾಯಿಸಿದರು.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇಷ್ಟೊಂದು ದೊಡ್ಡ ಯೋಜನೆ ಸರ್ಕಾರಕ್ಕೆ ತಿಳಿಯದಿರುವುದು ಸಣ್ಣ ವಿಷಯವಲ್ಲ, ವಿಡಿಯೋ ಮೂಲಕ ಇದು ಹೊರಬಂದಿದೆ ಎಂದರೆ ಸರ್ಕಾರ ಯಾವ ರೀತಿ ಆಡಳಿತ ನಡೆಸುತ್ತಿದೆ ಎಂಬುದಕ್ಕೆ ಸಾಕ್ಷಿ ಎಂದರು.

ಈ ವಿಚಾರ ಕೆಬಿಜೆಎನ್ನೆಲ್ ಅಧಿಕಾರಿಗಳಿಗೆ ತಿಳಿದಿರಲಿಲ್ಲವೇ? ರಾಜ್ಯದ ಗುಪ್ತಚರ ಇಲಾಖೆ ಏನು ಮಾಡುತ್ತಿದೆ? ಇಂತಹ ಗಂಭೀರ ವಿಷಯಗಳ ಬಗ್ಗೆ ಸರ್ಕಾರಕ್ಕೆ ಮೊದಲೇ ಮಾಹಿತಿ ಇರಲಿಲ್ಲವೇ? ರಾಜ್ಯದ ಹಿತಾಸಕ್ತಿಗೆ ಸಂಬಂಧಿಸಿದ ವಿಚಾರದಲ್ಲಿ ನಿರ್ಲಕ್ಷ್ಯ ವಹಿಸಿರುವುದಕ್ಕೆ ಹೊಣೆ ಹೊತ್ತು ಮುಖ್ಯಮಂತ್ರಿ ರಾಜೀನಾಮೆ ನೀಡಬೇಕು ಎಂದು ಅಂಗಡಿ ಆಗ್ರಹಿಸಿದರು.

ಮಹಾರಾಷ್ಟ್ರ ಸರ್ಕಾರ ಕರ್ನಾಟಕದ ಹಿತಾಸಕ್ತಿಯನ್ನು ಕಡೆಗಣಿಸದೆ ಯೋಜನೆ ರೂಪಿಸಬೇಕು. ಈ ವಿಚಾರವಾಗಿ ಪ್ರಧಾನಮಂತ್ರಿಗಳ ಬಳಿ ಸರ್ವಪಕ್ಷ ನಿಯೋಗ ಕರೆದೊಯ್ದು



ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ರಾಜ್ಯ ಸರ್ಕಾರದ ನಿಲುವನ್ನು ಸ್ಪಷ್ಟಪಡಿಸಬೇಕು ಎಂದರು.

ಕೃಷ್ಣಾ ನದಿ ಜೀವನಾಡಿ, ಯಾಗಿದ್ದು, ಈ ವರ್ಷ ಮಳೆಯ ಕೊರತೆಯ ನಡುವೆಯೂ ಜಿಲ್ಲೆಯ ಜನರು ಕೃಷ್ಣಾ ನದಿಯ ನೀರಿನಿಂದ ಬದುಕು ಸಾಗಿಸುತ್ತಿದ್ದಾರೆ. ಹೀಗಾಗಿ ಜಿಲ್ಲಾ ಉಸ್ತುವಾರಿ ಸಚಿವರು ಈ ವಿಷಯವನ್ನು ಅತ್ಯಂತ ಗಂಭೀರವಾಗಿ ಪರಿಗಣಿಸಬೇಕು ಎಂದರು.

ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ನಿರಂತರವಾಗಿ ಬೆಲೆ ಏರಿಕೆ ಮಾಡುವ ಮೂಲಕ ಜನಸಾಮಾನ್ಯರ ಬದುಕಿನ ಮೇಲೆ ಹೊರೆ ಹೇರುತ್ತಿದೆ. ಜನರ ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿ ಬಡವರ ಕುತ್ತಿಗೆ ಮೇಲೆ ಕಾಲಿಟ್ಟು ಆಡಳಿತ ನಡೆಸುತ್ತಿದೆ ಎಂದುಅಂಗಡಿ ಆರೋಪಿಸಿದರು.

ರಾಜ್ಯೋತ್ಸವದ ಶುಭ ಸಂದರ್ಭದಲ್ಲಿ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಬೆಲೆ ಏರಿಕೆಯ ಬರೆ ಎಳೆಯಲಾಗಿದೆ. ನಂದಿನಿ ಹಾಲು, ಮೊಸರಿನ ಬೆಲೆ ಏರಿಕೆ ಮಾಡಿ ನಾಲ್ಕೇ ದಿನಗಳಲ್ಲಿ ಸರ್ಕಾರಿ ಬಸ್ ಪ್ರಯಾಣ ದರವನ್ನೂ ಹೆಚ್ಚಿಸಲಾಗಿದೆ, ಬಸ್ ಪ್ರಯಾಣ ದರವನ್ನು ಶೇ.23ರಷ್ಟು ಹಾಗೂ ಬಿಎಂಟಿಸಿ ಬಸ್ ದರವನ್ನು ಶೇ.33ರಷ್ಟು ಹೆಚ್ಚಿಸುವ ಮೂಲಕ ಸರ್ಕಾರ ಜನರಿಗೆ ಅನ್ಯಾಯ ಮಾಡಿದೆ, ಕೂಡಲೇ ಬಸ್ ಪ್ರಯಾಣ ದರ ಏರಿಕೆ ನಿರ್ಧಾರವನ್ನು ಹಿಂಪಡೆಯಬೇಕು ಎಂದು ಒತ್ತಾಯಿಸಿದರು.

ಬೆಲೆ ಏರಿಕೆ ಉಡುಗೊರೆ



ಬಿಜೆಪಿ ಮುಖಂಡ ಉಮೇಶ ಕಾರಜೋಳ ಮಾತನಾಡಿ, ದೀಪಾವಳಿ ಹಬ್ಬದ ಸಂದರ್ಭದಲ್ಲಿ ರಾಜ್ಯ ಸರ್ಕಾರ ಜನರಿಗೆ ಎರಡು ಉಡು–ಗೊರೆಗಳನ್ನು ನೀಡಿದೆ. ಒಂದು ಬಸ್ ಪ್ರಯಾಣ ದರ ಏರಿಕೆ, ಮತ್ತೊಂದು ಹಾಲಿನ ದರ ಏರಿಕೆ. ನಂದಿನಿ ಹಾಲಿನ ಬೆಲೆ ಹೆಚ್ಚಿಸಿ ಆ ಹಣವನ್ನು ರೈತರಿಗೆ ನೀಡುವ ಬದಲು ಸರ್ಕಾರ ತನ್ನ ಖಜಾನೆಯಿಂದಲೇ ರೈತರಿಗೆ ನೆರವು ನೀಡಬೇಕಿತ್ತು. ಜನರ ಮೇಲೆ ಹೆಚ್ಚುವರಿ ಹೊರೆ ಹಾಕಿ ಸುಲಿಗೆ ಮಾಡುವುದು ಸರಿಯಲ್ಲ. ಇದೇ ರೀತಿ ಮುಂದುವ–ರಿದರೆ ಮುಂಬರುವ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಸೇರಿದಂತೆ ಎಲ್ಲ ಚುನಾವಣೆಗಳಲ್ಲಿ ಜನರು ಕಾಂಗ್ರೆಸ್ ಪಕ್ಷವನ್ನು ಮನೆಗೆ ಕಳುಹಿಸಲಿದ್ದಾರೆ ಎಂದರು.

ಬಿಜೆಪಿ ಬೆಳಗಾವಿ ವಿಭಾಗದ ಸಂಚಾಲಕ ಬಸವರಾಜ ಯಂಕಂಚಿ ಮಾತನಾಡಿ, ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದಲೂ ಸಾಮಾನ್ಯ ಜನರ ಮೇಲೆ ಒಂದರ ಮೇಲೆ ಒಂದರಂತೆ ಬೆಲೆ ಏರಿಕೆಯ ಹೊರೆ ಹೇರುತ್ತಿದೆ. ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಅವರ ನೇತೃತ್ವದಲ್ಲಿ ರಾಜ್ಯದ ವಿವಿಧ ಬಸ್ ನಿಲ್ದಾಣಗಳಲ್ಲಿ ಅಣಕು ಪ್ರದರ್ಶನಗಳ ಮೂಲಕ ಜನರಲ್ಲಿ ಬೆಲೆ ಏರಿಕೆ ಕುರಿತು ಜಾಗೃತಿ ಮೂಡಿಸಲಾಗುತ್ತಿದೆ ಎಂದರು. ಪತ್ರಿಕಾಗೋಷ್ಠಿಯಲ್ಲಿ ಈರಣ್ಣ ರಾವೂರ, ಬಸವರಾಜ ಬಿರಾದಾರ, ಚಿದಾನಂದ ಚಲವಾದಿ ಮೊದಲಾದವರು ಉಪಸ್ಥಿತರಿದ್ದರು.

ಅಗ್ನಿತತ್ವ ಮತ್ತು ವಾಯು ತತ್ವ


■ ಉದಯರಶ್ಮಿ ದಿನಪತ್ರಿಕೆ

ರಕ್ತವನ್ನು ಶುದ್ಧೀಕರಿಸಲು ನಮಗೆ ಶುದ್ಧವಾದ ಆಮ್ಲಜನಕದ ಅವಶ್ಯಕತೆ ಇದೆ. ಕೋವಿಡ್ ಸಮಯದಲ್ಲಂತೂ ನಮಗೆ ಆಮ್ಲಜನಕದ ಅವಶ್ಯಕತೆಯ ಅರಿವು ಉಂಟಾಗಿದ್ದು, ಎಷ್ಟೋ ಜನರು ಆಮ್ಲಜನಕ ದೊರೆಯದೆ ಸತ್ತು ಹೋಗಿದ್ದರು. ಈ ಪ್ರಕೃತಿಯ ಋಣವನ್ನು ತೀರಿಸಲಾಗದಷ್ಟು ನಾವು ಆಭಾರವನ್ನು ವ್ಯಕ್ತಪಡಿಸಿದ್ದು ಕೂಡ ಇದೇ



ವೀಣಾ ಹೇಮಂತಗೌಡ ಪಾಟೀಲ್.
ಮುಂಡರಗಿ – ಗದಗ

ಪಂಚ ಮಹಾಭೂತಗಳಲ್ಲಿ ಒಂದಾಗಿರುವ ಅಗ್ನಿ ತತ್ವವು ನಮ್ಮನ್ನು ಆವರಿಸಿದೆ. ಬೇಸಿಗೆಯ ಬಿಸಿಲು ನಮಗೆ, ಪಶು ಪಕ್ಷಿಗಳಿಗೆ ಬಾಯಾರಿಸಿ ದಣಿವನ್ನು ಮೂಡಿಸಿದ ಸಮಯದಲ್ಲಿ ಬಿಸಿಲನ್ನು ಬಯ್ಯದವರು ಇಲ್ಲ. ಯಪ್ಪಾ ಏನ್ ಸೆಕೆ ಎಂದು ನಿಡುಸುಯ್ಯದವರೇ ಇಲ್ಲ.



ಆದರೂ ಬಿಸಿಲಿನ ಅವಶ್ಯಕತೆ ನಮ್ಮೆಲ್ಲರಿಗೂ ಇದೆ. ಪಾಶ್ಚಾತ್ಯ ದೇಶಗಳಲ್ಲಿ ಬಿಸಿಲೆ ಕಾಣದ ಪರಿಸ್ಥಿತಿ ಇದ್ದು ಅಲ್ಲಿನ ಜನರು ತಮ್ಮ ದೇಹಕ್ಕೆ ಉಂಟಾಗುವ ಚರ್ಮದ ತೊಂದರೆಗಳಿಂದ ರಕ್ಷಿಸಿಕೊಳ್ಳಲು ಭಾರತ ದೇಶಕ್ಕೆ ಬಂದು ಇಲ್ಲಿಯ ಬೀಚುಗಳಲ್ಲಿ ಅರೆನಗ್ನರಾಗಿ ಮಲಗಿ ಬಿಸಿಲು ಕಾಯಿಸಿಕೊಳ್ಳುವ ಮೂಲಕ ರೋಗ ನಿರೋಧಕ ಶಕ್ತಿಯನ್ನು ಗಳಿಸಿಕೊಳ್ಳುತ್ತಾರೆ.

ನಮ್ಮ ಅನ್ನದಾತನಾದ ರೈತನಿಗೂ ಬಿಸಿಲಿನ ಮಹತ್ವ ಗೊತ್ತು. ಚಳಿಗಾಲದ ಇಳುವರಿಯನ್ನು ಪಡೆದ ನಂತರ ಖಾಲಿಯಾದ ಹೊಲವನ್ನು ರೈತ ಹದ ಮಾಡುವನು. ಹದ ಮಾಡುವುದು ಎಂದರೆ ಮಣ್ಣನ್ನು ಮೇಲೆ ಕೆಳಗೆ ಮಾಡುವುದು ಎಂದರ್ಥ. ಹೀಗೆ ಮಣ್ಣನ್ನು ಮೇಲೆ ಕೆಳಗೆ ಮಾಡಿ ಅದಕ್ಕೆ ಬಿಸಿಲಿನ ಝಳ ಬಡಿಸುವುದು ಮುಂದಿನ ಬೆಳೆ ಬೆಳೆಯಲು ಅನುಕೂಲವಾಗುತ್ತದೆ ಎಂಬ ದೂರದೃಷ್ಟಿಯಿಂದ.

ನಮ್ಮ ದೇಹಕ್ಕೆ ಅವಶ್ಯಕವಾದ ವಿಟಮಿನ್ ಡಿ ಮಣ್ಣಿಗೂ ಕೂಡ ಅತ್ಯವಶ್ಯಕ. ನಾವು ಹೊಲದಲ್ಲಿ ಬೆಳೆಯುವ ಬೆಳೆಗಳು, ಧಾನ್ಯಗಳು, ತರಕಾರಿಗಳಿಗೆ ವಿಟಮಿನ್ ಡಿ ತಾಕತ್ತನ್ನು ನೀಡಲು ಬೇಸಿಗೆಯ ಬಿಸಿಲು ಈ ಮಣ್ಣಿಗೆ ದೊರೆಯಲೇಬೇಕು. ಆದ್ದರಿಂದಲೇ ಅನುಭವಸ್ತನಾದ ರೈತನು ಮಣ್ಣನ್ನು ರಂಟೆ ಹೊಡೆದು ಮೇಲೆ ಕೆಳಗೆ ಮಾಡಿ ಮಣ್ಣಿನ ಹೆಂಟೆಗಳನ್ನು ಒಡೆದು ನೆಲವನ್ನು ಹದವಾಗಿಸುತ್ತಾನೆ.

ಒಂದೇ ಸಮನೆ ಮಳೆ ಹೊಡೆಯುತ್ತಿರುವಾಗ, ಚಳಿಯಿಂದ ಹಲ್ಲು ಕಟಗರಿಸುವಾಗ ಸೂರ್ಯನ ಬಿಸಿಲನ್ನು ಬಯಸುವ ನಾವು ಬೇಸಿಗೆ ಕಾಲದಲ್ಲಿ ಬಿಸಿಲು ಬಂದಾಗ ಅಯ್ಯೋ ಬಿಸಿಲು ಎಂದು ಹಲಬುವುದೇಕೆ? ಬಿಸಿಲನ್ನು ಅದು ಇರುವ ಹಾಗೆಯೇ ಇಂದು ನಾವು ಸ್ವೀಕರಿಸಿದರೆ ಮುಂದೆ ವಯಸ್ಸಾದ ಕಾಲದಲ್ಲಿ ವಿಟಮಿನ್ ಡಿ ಯ ಕೊರತೆಯಿಂದ ಬಳಲುವುದು ತಪ್ಪುತ್ತದೆ.

ಅಗ್ನಿ ತತ್ವವನ್ನು ಪ್ರತಿಪಾದಿಸುವ ಸೂರ್ಯ ನಮಗೆ ಬಿಸಿಲನ್ನು ನೀಡುವ ಮೂಲಕ ರೋಗ ರುಜಿನಗಳನ್ನು ದೂರವಿಡುತ್ತಾನೆ. ಕತ್ತಲಲ್ಲಿ ರೋಗರುಜಿನಗಳು ಹೆಚ್ಚು. ಗಾದೆ ಮಾತೆ ಹೇಳಿಲ್ಲವೇ ' ಕ್ವಾಣಿ ಕೂಸು ಕೊಳೀತು ಓಣಿ ಕೂಸು ಬೆಳೀತು' ಎಂದು. ಆದ್ದರಿಂದ ಬೇಸಿಗೆಯ ನಾಲ್ಕು ತಿಂಗಳ ಕಾಲ ಬಿಸಿಲನ್ನು ಅನುಭವಿಸಿ



ಅದ್ಭುತವನ್ನು ನಮ್ಮೊಳಗೆ ಒಂದಾಗಿಸಿಕೊಳ್ಳಬೇಕು.

ನಮ್ಮ ದೇಹದ ಅಡುಗೆ ಕೋಣೆ ನಮ್ಮ ಜಠರವಾಗಿದ್ದು ಅಲ್ಲಿ ಜಠರಾಗ್ನಿಯು ಒಲೆ ಇದ್ದಂತೆ. ಬೇಸಿಗೆಯಲಿ ಹೊರಗೆ ಸುತಾಡಿ ಬರುವ ಮಕ್ಕಳು



ಹಸಿವಿನಿಂದ ಆಹಾರವನ್ನು ಹೆಚ್ಚು ಸೇವಿಸುತ್ತವೆ ಇದಕ್ಕೆ ಕಾರಣ ಹೊರಗಿನ ಅಗ್ನಿಯು ನಮ್ಮ ದೇಹದ ಒಳಗಿನ ಜಠರಾಗ್ನಿಯನ್ನು ಉದ್ದೀಪಿಸುತ್ತದೆ. ಈ ಸಮಯದಲ್ಲಿ ಉಂಡ ಆಹಾರವು ಅತ್ಯಂತ ಸರಳವಾಗಿ ಜೀರ್ಣವಾಗಲು ಕಾರಣ ದೇಹದಲ್ಲಿರುವ ತೀಕ್ಷ್ಣ ಅಗ್ನಿ ತತ್ವ.

ಬಳ್ಳಾರಿ, ರಾಯಚೂರು, ಗುಲ್ಬರ್ಗದಂತಹ ಬಿಸಿಲಿನ ಪ್ರದೇಶಗಳಲ್ಲಿ ಜನರು ಆಹಾರದಲ್ಲಿ ಖಾರವನ್ನು ಹೆಚ್ಚಾಗಿ ಸೇವಿಸಲು ಕಾರಣ ಹೊರಗಿನ ಬಿಸಿಲಿನ ಅಗ್ನಿ ಮತ್ತು ದೇಹದ ಒಳಗಿನ ಅಗ್ನಿಯ ಸಮತೋಲನವನ್ನು ಕಾಪಾಡಿಕೊಳ್ಳುವ ಪ್ರಕ್ರಿಯೆ ಅವರಲ್ಲಿ ಪ್ರಕೃತಿ–ದತ್ತವಾಗಿ ಬಂದಿರುತ್ತದೆ. ಇನ್ನಿತರ ಪ್ರದೇಶಗಳಲ್ಲಿ ಸುಲಭವಾಗಿ ಜೀರ್ಣವಾಗಲು ಸಾಧ್ಯವಾಗದ ಮಂಡಕ್ಕಿ ಮಿರ್ಚಿಯಂತಹ ಆಹಾರ ಪದಾರ್ಥಗಳು ಅವರಿಗೆ ಅತ್ಯಂತ ಸರಳವಾಗಿ ಜೀರ್ಣವಾಗಲು ಕಾರಣ ಅಗ್ನಿ ತತ್ವದ ಸಮರ್ಪಕ ನಿರ್ವಹಣೆಯ ನಿಸರ್ಗ ಸಹಜ ಸಾಮರ್ಥ್ಯ ಅವರಿಗೆ ಇರುವುದು.

ಆದ್ದರಿಂದಲೇ ಮಕ್ಕಳನ್ನು ಬಿಸಿಲಿನಲ್ಲಿ ಆಡಲು ಕಳುಹಿಸಬೇಕು. ಬಿಸಿಲಿನಲ್ಲಿ ಆಡುವ ಮೂಲಕ ಮಕ್ಕಳು ಎಲ್ಲ ರೀತಿಯ ರೋಗರುಜಿನಗಳಿಂದ ಮುಕ್ತರಾಗುವ ರೋಗ ನಿರೋಧಕ ಶಕ್ತಿಯನ್ನು ಬೆಳೆಸಿಕೊಳ್ಳುತ್ತಾರೆ. ಬೇಸಿಗೆ ರಜೆಯನ್ನು ನೀಡುವುದು ಕೂಡ ಇದೇ ಕಾರಣಕ್ಕೆ.

ನಮ್ಮ ಬದುಕಿಗೆ ಮುಖ್ಯವಾದ ಇನ್ನೊಂದು ತತ್ವ ವಾಯು ತತ್ವ. ಆರ್ಟ್ ಆಫ್ ಲಿವಿಂಗ್ ನ ಶ್ರೀ ಶ್ರೀ ರವಿಶಂಕರ್ ಗುರೂಜಿ ಅವರು ಹೇಳುವಂತೆ ಯಾವ ರೀತಿ ಮೀನು ನೀರಿನಲ್ಲಿ ಸಹಜವಾಗಿ ಬದುಕುತ್ತದೆಯೋ ಹಾಗೆಯೇ ನಾವು ವಾಯುವಿನಲ್ಲಿ ಬದುಕುತ್ತಿದ್ದೇನೆ. ಗಾಳಿಯೇ ಆಡದ ಒಂದು ಕೋಣೆಯಲ್ಲಿ ಕೆಲವೇ ನಿಮಿಷಗಳು ಇರಲು ನಮ್ಮಿಂದ ಸಾಧ್ಯವಿಲ್ಲ ಎಂಬುದರ ಅರಿವಾದಾಗ ಮಾತ್ರ ನಮಗೆ ಗಾಳಿಯ ಅವಶ್ಯಕತೆಯ ಅರಿವು ಉಂಟಾಗುತ್ತದೆ.

ನಮ್ಮ ದೇಹದಲ್ಲಿ ಹರಿದಾಡುವ ಗಾಳಿಯು ನಮ್ಮ ಶ್ವಾಸಕೋಶಗಳನ್ನು ಮತ್ತು ಹೃದಯವನ್ನು ನಿಯಂತ್ರಿಸುತ್ತದೆ , ಯಾರಾದರೂ ಎಚ್ಚರ ತಪ್ಪಿದಾಗ ಇಲ್ಲವೇ ಅಸ್ವಸ್ಥರಾದಾಗ ಅವರಿಗೆ ಮುಖ್ಯವಾಗಿ ಗಾಳಿಯ ಅವಶ್ಯಕತೆ ಇರುವುದರಿಂದಲೇ ಅಂತಹ ವ್ಯಕ್ತಿಗಳನ್ನು ಜನಜಂಗುಳಿಯಿಂದ ದೂರ ಸರಿಸಿ ಪೇಪರ್ನಿಂದ ಗಾಳಿ ಹಾಕುವುದು ಇಲ್ಲವೇ ಫ್ಯಾನ್ ಹಾಕುವುದು ಮಾಡಿ ಅವರಿಗೆ ವಾಯುವನ್ನು ಒದಗಿಸುತ್ತೇವೆ.

ರಕ್ತವನ್ನು ಶುದ್ಧೀಕರಿಸಲು ನಮಗೆ ಶುದ್ಧವಾದ ಆಮ್ಲಜನಕದ ಅವಶ್ಯಕತೆ ಇದೆ. ಕೋವಿಡ್ ಸಮಯದಲ್ಲಂತೂ ನಮಗೆ ಆಮ್ಲಜನಕದ ಅವಶ್ಯಕತೆಯ ಅರಿವು ಉಂಟಾಗಿದ್ದು, ಎಷ್ಟೋ ಜನರು ಆಮ್ಲಜನಕ ದೊರೆಯದೆ ಸತ್ತು ಹೋಗಿದ್ದರು. ಈ ಪ್ರಕೃತಿಯ ಋಣವನ್ನು ತೀರಿಸಲಾಗದಷ್ಟು ನಾವು ಆಭಾರವನ್ನು ವ್ಯಕ್ತಪಡಿಸಿದ್ದು ಕೂಡ ಇದೇ ಸಮಯದಲ್ಲಿ.

ಮಕ್ಕಳ ಬದುಕಿನಲ್ಲಿ ಪಂಚ ತತ್ವಗಳ ಪಾತ್ರ(ವಾಯು ಮತ್ತು ಅಗ್ನಿ) ಮಕ್ಕಳು ಪ್ರಕೃತಿಯಲ್ಲಿ ಒಂದಾಗಿ ಜೋರಾಗಿ ಓಡಿದಾಗ ಓಡುತ್ತಾ ಆಟವಾಡಿದಾಗ, ಏದುಸಿರು ಬಿಡುವಂತೆ ಆದಾಗ ಅವರ ಶ್ವಾಸಕೋಶಗಳಲ್ಲಿ ಹೆಚ್ಚಿನ ಆಮ್ಲಜನಕ ಪೂರೈಕೆಯಾಗಿ ರಕ್ತ ಚಲನೆ ಸರಾಗವಾಗಿ ಆಗುತ್ತದೆ. ದೇಹದ ಎಲ್ಲಾ ಅಂಗಗಳಿಗೂ ಆಮ್ಲಜನಕದ ನಿರಂತರ ಸರಬರಾಜು ಆಗುವುದರಿಂದ ವ್ಯಕ್ತಿಯು ಆರೋಗ್ಯವಂತನಾಗುತ್ತಾನೆ. ಇನ್ನು ಹಿರಿಯರು ಕೂಡ ವಾಕಿಂಗ್ ಮಾಡಿ ಬಂದಾಗ ಅವರಿಗೆ ದೊರೆಯುವ ಆಹ್ಲಾದಕರ ಅನುಭವ ಬೇರಾವ ಕೆಲಸ ಕಾರ್ಯಗಳಲ್ಲಿ ದೊರೆಯದು ಎಂದು ವ್ಯಕ್ತಪಡಿಸಲು ಕಾರಣ ಮುಂಜಾನೆಯ ಶುದ್ಧ ವಾತಾವರಣದಲ್ಲಿ ಹೆಚ್ಚಿನ ಪ್ರಮಾಣದ ಆಮ್ಲಜನಕ ದೊರೆತು ಅದು ಅವರ ಮನಸ್ಸು ಮತ್ತು ಮೆದುಳನ್ನು ಶಾಂತವಾಗಿಸುತ್ತದೆ.

ಕೋಣೆಯಲ್ಲಿ ಫ್ಯಾನ್ ಹಾಕಿಕೊಂಡು ಮಲಗಿದಾಗ ಕೊಂಚ ಸಮಯದ ನಂತರ ಫ್ಯಾನ್ ನ ಗಾಳಿ ನಮಗೆ ಬಿಸಿಯಾಗಿ ತೋರುತ್ತದೆ, ದೇಹ ಜಡತೆಯನ್ನು ಹೊಂದುತ್ತದೆ ಅದೇ ಮನೆಯ ಹೊರಗಿನ ಅಂಗಳದಲ್ಲಿ ನಿಸರ್ಗ ಸಹಜವಾದ ಗಾಳಿಗೆ ಮೈಯನ್ನು ಒಡ್ಡಿದಾಗ ಮನಸ್ಸು ಸಂತಸದ ಕಡಲಾಗಿ ನೆಮ್ಮದಿ ಆವರಿಸುತ್ತದೆ.

ವಾಯು ಮತ್ತು ಅಗ್ನಿಗಳು ಒಂದಕ್ಕೊಂದು ಪೂರಕವಾಗಿ ಕಾರ್ಯನಿರ್ವಹಿಸುವ ಮೂಲಕ ನಮಗೆ ಹೆಚ್ಚಿನ ಶಕ್ತಿಯನ್ನು ಕೊಡ ಮಾಡುತ್ತವೆ.





ಎಚ್‌ಐವಿ ತಡೆಗೆ ಅರಿವು ಮೂಡಿಸಿದ ಎನ್ನೆಸ್ಸೆಸ್ ಸ್ವಯಂಸೇವಕರು

■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಎಚ್‌ಐವಿ ಸೋಂಕಿನ ಕು–ರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಉದ್ದೇಶದಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಜಿಲ್ಲಾ ಏಡ್ಸ್ ನಿರೋಧಕ ಮತ್ತು ನಿಯಂತ್ರಣ ಘಟಕ ಬೆಳಗಾವಿ, ತಾಲೂಕು ಸಾರ್ವಜನಿಕ ಆಸ್ಪತ್ರೆ ಅಥಣಿ ಹಾಗೂ ಎಸ್‌ಎಸ್–ಎಂಎಸ್ ಮಹಾವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್) ಘಟಕದ ಸಂಯುಕ್ತ ಆಶ್ರಯದಲ್ಲಿ ನವೆಂಬರ್ 5 ರಂದು ಎಚ್‌ಐವಿ ಜಾಗೃತಿ ಅಭಿಯಾನ ಹಾಗೂ ಬೀದಿ ನಾಟಕ ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮವನ್ನು ತಾಲೂಕು ಆರೋಗ್ಯ ಅಧಿಕಾರಿ ಡಾ. ಬಿ.ಜಿ. ಕಾಗೆ ಉದ್ಘಾಟಿಸಿದರು.

ಬಳಿಕ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು ಅಥಣಿಯ ಬಸ್ ನಿಲ್ದಾಣ, ಅಂಬೇಡ್ಕರ್ ವೃತ್ತ, ಹಳಿಯಾಳ ವೃತ್ತ ಹಾಗೂ ತಾಲೂಕು ಸಾರ್ವಜನಿಕ ಆಸ್ಪತ್ರೆಯ ಆವರಣದಲ್ಲಿ ಬೀದಿ ನಾಟಕ ಪ್ರದರ್ಶಿಸುವ ಮೂಲಕ ಎಚ್‌ಐವಿ ಸೋಂಕಿನ ಹರಡುವಿಕೆ, ತಡೆಗಟ್ಟುವ ಕ್ರಮಗಳು, ಮುನ್ನೆಚ್ಚರಿಕೆ ಹಾಗೂ ಸೋಂಕಿತರ ಬಗ್ಗೆ ಸಮಾಜದಲ್ಲಿರಬೇಕಾದ ಜವಾಬ್ದಾರಿಯುತ ಮನೋಭಾವದ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸಿದರು.

ಈ ಸಂದರ್ಭದಲ್ಲಿ ತಾಲೂಕು ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶ್ರೀಮತಿ ಗೀತಾ ಕೊಡತೆ, ಘಟಕ ವ್ಯವಸ್ಥಾಪಕ ಜಗದಾಳೆ, ಎಸ್‌ಎಸ್–ಎಂಎಸ್ ಮಹಾವಿದ್ಯಾಲಯದ ಎನ್‌ಎಸ್‌ಎಸ್ ಕಾರ್ಯಕ್ರಮಾಧಿಕಾರಿ ಕೆ.ಎಂ. ಅಚ್ಚುತಾನಂದ, ಆನಂದ ಸೊಳಸಿ, ಯುವ ರೆಡ್‌ಕ್ರಾಸ್ ಘಟಕದ ಅಧಿಕಾರಿಗಳಾದ ಡಾ. ಮಲ್ಲಿಕಾರ್ಜುನ ಎಂ., ಐಸಿಟಿಸಿ ಆಪ್ತ ಸಮಾಲೋಚಕರಾದ ಶಂಕ್ರಯ್ಯ ಬಿ. ಮಠಪತಿ, ಎಆರ್‌ಟಿ ಆಪ್ತ ಸಮಾಲೋಚಕರಾದ ಬಸವರಾಜ ಮುದಿಗೌಡರ, ಶಕ್ತಿ ಟಿಐ ಎನ್‌ಜಿಒ ಪ್ರತಿನಿಧಿಗಳು ಹಾಗೂ ಸಂಪರ್ಕ ಕಾರ್ಯಕರ್ತರು ಉಪಸ್ಥಿತರಿದ್ದರು. ಎನ್‌ಎಸ್‌ಎಸ್ ಸ್ವಯಂಸೇವಕರು ಬೀದಿ ನಾಟಕದ ಮೂಲಕ ನೀಡಿದ ಆರೋಗ್ಯ ಜಾಗೃತಿ ಸಂದೇಶ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಯಿತು. ಅಲ್ಲದೆ, ಎಚ್‌ಐವಿ ಕುರಿತು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಈ ಅಭಿಯಾನ ಯಶಸ್ವಿಯಾಯಿತು.

ಬಿ.ಎಲ್.ಡಿ.ಇ ಸಂಸ್ಥಾಪನ ದಿನ ಕಾರ್ಯಕ್ರಮದಲ್ಲಿ ಆಲಮೇಲ ವಿರಕ್ತಮಠದ ಮಲ್ಲಿಕಾರ್ಜುನ ಮಹಾಸ್ವಾಮೀಜಿ ಅಭಿಮತ

ಉಕ ಮಕ್ಕಳ ಬದುಕು ಬೆಳಗುತ್ತಿರುವ ಬಿಎಲ್ಡಿಇ ಸಂಸ್ಥೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಕನ್ನಡ ಭಾಷಾಭಿಮಾನದ ಪ್ರೇರಣೆಯಿಂದ ಪ್ರಾರಂಭವಾದ ಬಿ.ಎಲ್.ಡಿ.ಇ ಸಂಸ್ಥೆ ಉತ್ತರ ಕರ್ನಾಟಕದ ಮಕ್ಕಳ ಬದುಕು ಬೆಳಗುತ್ತಿದೆ ಎಂದು ಆಲಮೇಲ ವಿರಕ್ತಮಠದ ಮಲ್ಲಿಕಾರ್ಜುನ ಮಹಾಸ್ವಾಮೀಜಿ ಹೇಳಿದರು.

ಶುಕ್ರವಾರ ನಗರದ ಶ್ರೀ ಬಿ. ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯದ ಗ್ರಂಥಾಲಯ ಸಭಾಂಗಣದಲ್ಲಿ ನಡೆದ ಬಿ. ಎಲ್. ಡಿ. ಇ ಸಂಸ್ಥಾಪನ ದಿನ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಮಹಾರಾಷ್ಟ್ರದ ಪ್ರಭಾವದಲ್ಲಿದ್ದ ಮುಂಬಯಿ ಕರ್ನಾಟಕದಲ್ಲಿದ್ದ ವಿಜಯಪುರದಲ್ಲಿ ಅಂದು ಮರಾಠಿ ಪ್ರಭಾವವಿತ್ತು. ಕನ್ನಡ ಕಲಿಯುವುದು ಮತ್ತು ಶಿಕ್ಷಣ ಪಡೆಯಲು ಇಲ್ಲಿ ಅಷ್ಟೊಂದು ಅವಕಾಶಗಳಿರಲಿಲ್ಲ. ಅಂಥ ಸಮಯದಲ್ಲಿ ವಚನಪಿತಾಮಹ ಡಾ. ಫ. ಗು. ಹಳಕಟ್ಟಿ ಅವರು ಸಂಸ್ಥೆಯನ್ನು ಪ್ರಾರಂಭಿಸಿದರು. ಅದೇ ರೀತಿ ಉತ್ತರ ಕರ್ನಾಟಕದಲ್ಲಿ ಅರಟಾಳು ರುದ್ರಗೌಡರು, ಶಿರಸಂಗಿ ಲಿಂಗರಾಜರು ಸೇರಿ ಹಲವು ಮಹನೀಯರಿಂದ ಈ ಪ್ರದೇಶದಲ್ಲಿ ಶಿಕ್ಷಣ ಕ್ರಾಂತಿಯಾಗಿದೆ. ಬಿ.ಎಲ್.ಡಿ.ಇ ಸಂಸ್ಥೆ ಅಭಿವೃಧಿಗೆ ಕಾರಣರಾದ ಬಂಥನಾಳ ಶಿವಯೋಗಿಗಳು, ಶ್ರೀಮತಿ ಬಂಗಾರಮ್ಮ ಸಜ್ಜನ ಅವರು ಹಾಗೂ ಬಿ. . ಪಾಟೀಲ ಅವರನ್ನು ನಾವು ಸದಾ ಸ್ಮರಿಸಿಕೊಳ್ಳಬೇಕು. ಹಳಕಟ್ಟಿಯವರು ವಚನಗಳನ್ನು ರಕ್ಷಿಸುವುದರ ಜೊತೆಗೆ ಈ ನೆಲಕ್ಕೆ ಅಕ್ಷರಗಳನ್ನು ಬಿತ್ತಿದ್ದಾರೆ. ಇಂದು ಈ ಸಂಸ್ಥೆ ನಾಡಿನ ನಾಡಿ ಮಿಡಿತವಾಗಿದೆ. ಇಲ್ಲಿನ ಪ್ರದೇಶ ಶಿಕ್ಷಣಮಯವಾಗಿ ನಮ್ಮ ಮಕ್ಕಳು ವಿದ್ಯಾವಂತರಾಗಿದ್ದಾರೆ. ನಮಗೆಲ್ಲ ಕಲಾದಗಿ ಮೊದಲು ಜಿಲ್ಲಾ ಕೇಂದ್ರವಾಗಿತ್ತು. ನಂತರ ವಿಜಯಪುರ ಜಿಲ್ಲೆಯಾದಾಗ ಇಲ್ಲಿ ಲಿಂಗ, ಜಂಗಮವಾಗಿ ಅದನ್ನು ಪರಿವರ್ತಿಸಿದ ಕೀರ್ತಿ ಹಳಕಟ್ಟಿಯವರಿಗೆ ಸಲ್ಲುತ್ತದೆ. ಅವರಿಂದ ಈ ಜ್ಯೋತಿಯನ್ನು ಮುಂದೆ ಬೆಳಗಿಸಿದವರು ಸಂಗನಬಸವ ಶಿವಯೋಗಿಗಳು. ಮುಂದೆ ಬಿ. ಎಂ. ಪಾಟೀಲ ಅವರು ಈ ತೇರನ್ನು ಎಳೆದಿದ್ದಾರೆ.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಸ್ಥೆಯ ನಿರ್ದೇಶಕ ಅಶೋಕ ಜಿ. ವಾರದ ಮಾತನಾಡಿ, ಹಳಕಟ್ಟಿ ಮತ್ತು ಬಂಥನಾಳ ಶಿವಯೋಗಿಗಳ ಆಶಯದಂತೆ ಬಿ. ಎಂ. ಪಾಟೀಲ ಅವರು ಶಿಕ್ಷಣ ಕ್ರಾಂತಿ ಮಾಡಿದರು. ಎಂಜಿನಿಯರಿಂಗ್, ಮೆಡಿಕಲ್, ನರ್ಸಿಂಗ್ ಕಾಲೇಜುಗಳನ್ನು ಪ್ರಾರಂಭಿಸಿದರು. ದುಡ್ಡಿಗಾಗಿ ಶಿಕ್ಷಣ ಎನ್ನುವ ಇಂದಿನ ವಾತಾವರಣದಲ್ಲಿ ಬಿ. ಎಲ್. ಡಿ. ಇ ಸಂಸ್ಥೆಯು ಉತ್ತಮ ನಾಗರಿಕರನ್ನು ರೂಪಿಸುವ ಕೆಲಸವನ್ನು ಮಾಡುತ್ತಿದೆ ಎಂದು ಹೇಳಿದರು.

ಬಿ.ಎಲ್.ಡಿ.ಇ ಸಂಸ್ಥೆಯ ಎ. ವಿ. ಎಸ್ ಹೈಟೆಕ್ ಆಯುರ್ವೇದ ಕಾಲೇಜು, ಆಸ್ಪತ್ರೆ ಹಾಗೂ ಸಂಶೋಧನ ಕೇಂದ್ರದ ಪ್ರಾಚಾರ್ಯ ಡಾ. ಅಶೋಕ ಪಾಟೀಲ ಪ್ರಾಸ್ತಾವಿಕ ಮಾತನಾಡಿ, ಭಾರತೀಯ ಲಿಂಗಾಯತ ಅಭಿವೃದ್ಧಿ ಶಿಕ್ಷಣ ಸಂಸ್ಥೆ ಸಾಮಾಜಿಕ ಸುಧಾರಣೆಯ ಸಂಕೇತ ಮತ್ತು ಈ ಭಾಗದ ಅಭಿವೃದ್ಧಿಯ ದ್ಯೋತಕವಾಗಿದೆ. ಶತಮಾನದ ಹಿಂದೆ ಈ ಸಂಸ್ಥೆ ಹಳಕಟ್ಟಿ ಅವರಿಂದ ಪ್ರಾರಂಭವಾಗಿ ಬಂಥ–ನಾಳ ಸಂಗನಬಸವ ಶಿವಯೋಗಿಗಳಿಂದ ಬಲಗೊಂಡು, ಬಿ. ಎಂ. ಪಾಟೀಲ ಅವರಿಂದ ಉನ್ನತ ಸ್ಥಾನಕ್ಕೇ–ರಿದೆ. ಈಗ ಸಂಸ್ಥೆಯ ಅಧ್ಯಕ್ಷ ಎಂ. ಬಿ. ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಸುನೀಲಗೌಡ ಪಾಟೀಲ ಅವರ ಮುಂದಾಳತ್ವದಲ್ಲಿ ಆಧುನಿಕ ಹೊಸ ಯುಗ ಪ್ರವೇಶಿಸಿದೆ. ಬಂಗಾರಮ್ಮ ಸಜ್ಜನರಿಂದ ಹಿಡಿದು ಅನೇಕ ಮಹನೀಯರು ಭೂಮಿ ನೀಡಿ ಮಹತ್ತರ ಕೆಲಸ ಮಾಡಿದ್ದಾರೆ. 2008ರಲ್ಲಿ ಇದು ಡೀಮ್ಡ್ ವಿಶ್ವವಿದ್ಯಾಲಯವಾಗಿ ಇಂದು ಹೆಮ್ಮರವಾಗಿ ಬೆಳೆದು ದೇಶದಲ್ಲೇ ಪ್ರತಿಷ್ಠಿತ ಸಂಸ್ಥೆಯಾಗಿ ನಿಂತಿದೆ. ನಮ್ಮ ಆಯುರ್ವೇದ ಕಾಲೇಜು ದೇಶದಲ್ಲಿಯೇ ನಾಲ್ಕನೆಯ ಸ್ಥಾನದಲ್ಲಿದೆ ಎಂದು ಹೇಳಿದರು.

ಸಂಸ್ಥೆಯ ನಿರ್ದೇಶಕ ಸದಸ್ಯ ಡಾ. ಎ. ಬಿ. ಪಾಟೀಲ ಮಾತನಾಡಿ, ತಮ್ಮ ತಂದೆ ಬಿ. ಆರ್. ಪಾಟೀಲ ಲಿಂಗದಳ್ಳಿ ಮತ್ತು ದಿ. ಬಿ. ಎಂ. ಪಾಟೀಲ ಅವರು ಕೃಷ್ಣ ಸುಧಾಮರ ರೀತಿಯಲ್ಲಿ ಬಾಂಧವ್ಯ ಹೊಂದಿದ್ದರು. ಸಂಸ್ಥೆಯ ಅಭಿವೃದ್ಧಿಯಲ್ಲಿ ಪ್ರಾತಃಸ್ಮರಣೀಯರು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ ಅಧ್ಯಕ್ಷ ಮತ್ತು ಸಚಿವ ಎಂ. ಬಿ. ಪಾಟೀಲ ಮತ್ತು ಪ್ರಧಾನ ಕಾರ್ಯದರ್ಶಿ ಹಾಗೂ ವಿಧಾನ ಪರಿಷತ್ ಶಾಸಕ ಸುನೀಲಗೌಡ ಪಾಟೀಲ ಅವರು ಸಂಸ್ಥೆಯನ್ನು ಉತ್ತರೋತ್ತರವಾಗಿ ಅಭಿವೃದ್ಧಿ ಪಡಿಸುವ ಮೂಲಕ ದೇಶದ ಅತ್ಯುತ್ತಮ ಶಿಕ್ಷಣ ಸಂಸ್ಥೆಯನ್ನಾಗಿ ರೂಪಿಸಿದ್ದಾರೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ನಾನಾ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಬಿ.ಎಲ್.ಡಿ.ಇ. ಸಂಸ್ಥೆಯ ಪ್ರತಿಭಾವಂತ ವಿದ್ಯಾರ್ಥಿಗಳು, ಬೋಧಕ ಹಾಗೂ ಬೋಧಕರ ಹೊರತಾದ ಸಿಬ್ಬಂದಿ, ನಾನಾ ವಿಭಾಗಗಳ ಮುಖ್ಯಸ್ಥರನ್ನು ಸನ್ಮಾನಿಸಿ ಗೌರವಿಸಲಾಯಿತು.

ಶ್ರೀ ಬಿ. ಎಂ. ಪಾಟೀಲ ಪಬ್ಲಿಕ್ ಶಾಲೆಯ ಮಕ್ಕಳು ಸಂಸ್ಥಾಗೀತೆ ಹಾಡಿದರು. ಡಾ. ರೇಣುಕಾ ತೆನ್ನಳ್ಳಿ, ಡಾ. ಡಿ. ಎನ್. ಧರಿ, ಡಾ.ಮಾನಸಾ ಪಂಚಾಕ್ಷರಿಮಠ ನಿರೂಪಿಸಿದರು. ಡಾ. ಮಲ್ಲಮ್ಮ ಬಿರಾದಾರ ವಂದಿಸಿದರು.



ಪ್ರತಿಭಾ ಅನ್ವೇಷಣೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕ :ಪಾಟೀಲ

■ ಉದಯರಶ್ಮಿ ದಿನಪತ್ರಿಕೆ

ಕೋರವಾರ ಗ್ರಾಮದಲ್ಲಿ ಆಯೋಜಿಸಿದ್ದ ಕೋರವಾರ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮ

ದೇವರಹಿಪ್ಪರಗಿ: ಮಕ್ಕಳ ಪ್ರತಿಭೆಯನ್ನು ಗುರ್ತಿಸಿ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿಭಾ ಕಾರಂಜಿ ಅಂತಹ ಶೈಕ್ಷಣಿಕ ಕಾರ್ಯಕ್ರಮಗಳು ಮಗುವಿನ ಭವಿಷ್ಯದ ದೃಷ್ಟಿಯಿಂದ ತುಂಬಾ ಉತ್ತಮ ವೇದಿಕೆಗಳಾಗಿವೆ ಎಂದು ಶೇಖರಗೌಡ ಪಾಟೀಲ ಹೇಳಿದರು.

ತಾಲ್ಲೂಕಿನ ಕೋರವಾರ ಗ್ರಾಮದ ಮಾನಸಾ ಆಂಗ್ಲ ಮಾಧ್ಯಮ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಜರುಗಿದ ಕೋರವಾರ ಕ್ಲಸ್ಟರ್ ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಶರವೇಗದಲ್ಲಿ ಬೆಳೆಯುತ್ತಿರುವ ಇಂದಿನ ಪ್ರಪಂಚದಲ್ಲಿ ಇಂತಹ ಪ್ರತಿಭಾ ಅನ್ವೇಷಣೆ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಪೂರಕವಾಗಿವೆ ಎಂದರು.

ಗ್ರಾಮದ ಹಿರಿಯ ಮುಖಂಡ ರಾಜಶೇಖರ ಛಾಯಾಗೋಳ ಮಾತನಾಡಿ, ಗ್ರಾಮೀಣ ಪ್ರದೇಶಗಳ ಬಡಮಕ್ಕಳನ್ನು ಸ್ಪರ್ಧಾತ್ಮಕವಾಗಿ ತಯಾರಿ ಮಾಡುವ ನಿಟ್ಟಿನಲ್ಲಿ ಸರ್ಕಾರ ಶಿಕ್ಷಕರ ಹೊರೆಯನ್ನು ಕಡಿಮೆ ಮಾಡಿ ಗುಣಮಟ್ಟದ ಹಾಗೂ ಅತ್ಯಾಧುನಿಕ ಕಲಿಕೆಗೆ ಅವಕಾಶ ನೀಡಬೇಕು ಎಂದರು.


ಕೋರವಾರದ ಸಮೂಹ ಸಂಪನ್ಮೂಲ ವ್ಯಕ್ತಿ ಬಾಬು ನಡುವಿನಕೇರಿ ಹಾಗೂ ಶಿಕ್ಷಕ ಅರುಣ ಕೋರವಾರ ಮಾತನಾಡಿದರು. ನಂತರ ದಿನಪೂರ್ತಿ ಸ್ಪರ್ಧೆಗಳನ್ನು ಆಯೋಜಿಸಿ ವಿಜೇತ ಮಕ್ಕಳಿಗೆ ಪ್ರಮಾಣಪತ್ರಗಳನ್ನು ವಿತರಿಸಲಾಯಿತು.

ಸ್ಥಳೀಯ ಮಾನಸಾ ಶಾಲೆಯ ಅಧ್ಯಕ್ಷೆ ಭೀಮಬಾಯಿ ಸೋಲಂಕರ, ಕೆಬಿಎಂಪಿಎಸ್ ಕೋರವಾರ ಶಾಲೆಯ ಮುಖ್ಯಶಿಕ್ಷಕಿ ಬಿ.ಬಿ.ಅಗ್ನಿ, ನಿವೃತ್ತ ಮುಖ್ಯಶಿಕ್ಷಕ ಬಸವರಾಜ ಬಿರಾದಾರ, ಶಿಕ್ಷಕರ ಸಂಘದ ಕಾರ್ಯದರ್ಶಿ ಬಸವರಾಜ ನಾಗರಾಳ, ಕೊಕಟನೂರ ಶಾಲೆಯ ಎಂ.ಎಂ.ಮೋಮಿನ, ಪ್ರೇಮಸಿಂಗ ಚವ್ಹಾಣ, ಬಿ.ಎಸ್.ಬೆಳ್ಳುಂಡಗಿ, ಅಶೋಕ ನಾಯ್ಕೋಡಿ ಸೇರಿದಂತೆ ಕೋರವಾರ ಕ್ಲಸ್ಟರಿನ ಶಿಕ್ಷಕರು, ಮಕ್ಕಳು ಇದ್ದರು.

9 ವರ್ಷಗಳಲ್ಲಿ 66 ಕ್ರಿಮಿನಲ್ ಪ್ರಕರಣಗಳು ದಾಖಲು; 'ಒಂಆ', 'ಒಆ' ಹೆಸರಿನಲ್ಲಿ ಗ್ಯಾಂಗ್ ಕಟ್ಟಿಕೊಂಡು ಅಪರಾಧ ಕೃತ್ಯ ಆರೋಪ

ಕುಖ್ಯಾತ ರೌಡಿ ಮಾಳಪ್ಪ ದೇವಕತೆ ಬಂಧನ ಅವಧಿ ವಿಸ್ತರಣೆ

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯ ಕುಖ್ಯಾತ ರೌಡಿ ಮಾಳಪ್ಪ ಬಿನ್ ಅಮಸಿದ್ದ ದೇವಕತೆ (30) ವಿರುದ್ಧ ಕರ್ನಾಟಕ ಗೂಂಡಾ ಕಾಯ್ದೆಯಡಿ ಹೊರಡಿಸಲಾಗಿದ್ದ ಬಂಧನ ಆದೇಶವನ್ನು ರಾಜ್ಯ ಸರ್ಕಾರ ಒಂದು ವರ್ಷದ ಅವಧಿಗೆ ವಿಸ್ತರಿಸಿ ಆದೇಶ ಹೊರಡಿಸಿದೆ.

ಇಂಡಿ ತಾಲ್ಲೂಕಿನ ಕ್ಯಾತನಕೇರಿ ಗ್ರಾಮದ ನಿವಾಸಿಯಾದ ಮಾಳಪ್ಪ ದೇವಕತೆ ವಿರುದ್ಧ ವಿಜಯಪುರ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು ಕರ್ನಾಟಕ ಗೂಂಡಾ ಕಾಯ್ದೆ–1985ರ ಕಲಂ 3(1) ಮತ್ತು 3(2)ರ ಅಡಿಯಲ್ಲಿ 2026ರ ಸೆ.25ರಂದು ಬಂಧನ ಆದ–ೇಶ ಹೊರಡಿಸಿದ್ದರು. ಈ ಆದೇಶಕ್ಕೆ ಅ.5ರಂದು ಸರ್ಕಾರ ಅನುಮೋದನೆ ನೀಡಿತ್ತು. ನಂತರ ಕಾಯ್ದೆಯ ಕಲಂ 9ರ ಅಡಿಯಲ್ಲಿ ರಚಿಸಲಾದ ಸಲಹಾ ಮಂಡಳಿಯು ನ.3ರಂದು ವರದಿ ಸಲ್ಲಿಸಿ, ಮಾಳಪ್ಪನನ್ನು ಬಂಧನದಲ್ಲಿಡಲು ಸಾಕಷ್ಟು ಕಾರಣಗಳಿವೆ ಎಂದು ಅಭಿಪ್ರಾಯಪಟ್ಟಿತ್ತು. ಈ ವರದಿಯನ್ನು ಪರಿಗಣಿಸಿದ ರಾಜ್ಯ ಸರ್ಕಾರ, ಕಾಯ್ದೆಯ ಕಲಂ 12(1)ರಡಿ ಬಂಧನ ಆದೇಶವನ್ನು ಸ್ಥಿರೀಕರಿಸಿ, ಕಲಂ 13ರ ಅನ್ವಯ ಸೆ.25, 2026ರಿಂದ ಒಂದು ವರ್ಷದ ಅವಧಿಗೆ ಬಂಧನ ಮುಂದುವರಿಸಲು ಆದೇಶಿಸಿದೆ.

ಒಂಬತ್ತು ವರ್ಷಗಳಲ್ಲಿ 66 ಪ್ರಕರಣಗಳು

ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸಿರುವ ಪ್ರಸ್ತಾವನೆಯ ಪ್ರಕಾರ, ಮಾಳಪ್ಪ ದೇವಕತೆ ತನ್ನ 21ನೇ ವಯಸ್ಸಿನಿಂದಲೇ ಅಪರಾಧ ಚಟುವಟಿ–ಕೆಗಳಲ್ಲಿ ತೊಡಗಿಸಿಕೊಂಡಿದ್ದಾನೆ. ಕಳೆದ ಒಂಬತ್ತು ವರ್ಷಗಳಲ್ಲಿ ಆತನ ವಿರುದ್ಧ ಕೊಲೆ, ಕೊಲೆಯತ್ನ, ಮಾರಣಾಂತಿಕ ಹಲ್ಲೆ, ದೊಂಬಿ, ಅಪಹರಣ, ಲೈಂಗಿಕ ದೌರ್ಜನ್ಯ ಹಾಗೂ ಎನ್‌ಡಿಪಿಎಸ್ ಕಾಯ್ದೆಯಡಿ ಸೇ–ರಿದಂತೆ ಒಟ್ಟು 66 ಕ್ರಿಮಿನಲ್ ಪ್ರಕರಣಗಳು ದಾಖಲಾಗಿವೆ.

ತನ್ನ ತಂದೆಯ ಹೆಸರಿನ ಹಾಗೂ ಅಡ್ಡಹೆಸರಿನ ಮೊದಲ ಮೂರು ಅಕ್ಷರಗಳನ್ನು ಸೇರಿಸಿ 'ಒಂಆ' ಮತ್ತು 'ಒಆ' (ಮಾಲು ದಾದಾ) ಹೆಸರಿನಲ್ಲಿ ರೌಡಿ ಗ್ಯಾಂಗ್ ಕಟ್ಟಿಕೊಂಡು ಅಪರಾಧ ಕೃತ್ಯಗಳನ್ನು ನಡೆಸುತ್ತಿದ್ದಾನೆ ಎಂದು ಆರೋಪಿಸಲಾಗಿದೆ. ಹೊರ್ತಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಪ್ರಾಪ್ತ ಬಾಲಕಿಯ ಅಪಹರಣ ಮತ್ತು ಲೈಂಗಿಕ ದೌರ್ಜನ್ಯ ಸೇರಿದಂತೆ ಹಲವು ಗಂಭೀರ ಪ್ರಕರಣಗಳಲ್ಲಿ ಈತನ ಹೆಸರು ಕೇಳಿಬಂದಿದೆ.


ಸಾಮಾಜಿಕ ಜಾಲತಾಣಗಳಲ್ಲಿ ರೌಡಿಸಂ ಪ್ರದರ್ಶನ

ಸಹಚರರೊಂದಿಗೆ ಇನ್‌ಸ್ಟಾಗ್ರಾಂ, ಫೇಸ್‌ಬುಕ್ ಹಾಗೂ ವಾಟ್ಸ್‌ಪ್‌ಗಳಲ್ಲಿ ಅಪಾಯಕಾರಿ ಆಯುಧಗಳನ್ನು ಹಿಡಿದುಕೊಂಡಿರುವ ಛಾಯಾಚಿತ್ರಗಳನ್ನು ಪ್ರಕಟಿಸಿ, ರೌಡಿ ಗ್ಯಾಂಗ್‌ನ ನಾಯಕನಂತೆ ಬಿಂಬಿಸಿಕೊಳ್ಳುವ ಮೂಲಕ ರೌಡಿಸಂ ವೈಭವೀಕರಿಸುತ್ತಿದ್ದಾನೆ ಎಂದು ಜಿಲ್ಲಾಡಳಿತದ ಪ್ರಸ್ತಾವನೆಯಲ್ಲಿ ಉಲ್ಲೇಖಿಸಲಾಗಿದೆ. ಇಂತಹ ಚಟುವಟಿ–ಕೆಗಳು ಸಾರ್ವಜನಿಕರಲ್ಲಿ ಭಯದ ವಾತಾವರಣ ಸೃಷ್ಟಿಸಿ, ಸಮಾಜದ ಸ್ವಾಸ್ಥ್ಯ ಹಾಗೂ ಸಾರ್ವಜನಿಕ ಸುವ್ಯವಸ್ಥೆಗೆ ಧಕ್ಕೆ ಉಂಟುಮಾಡುವ ಸಾಧ್ಯತೆಯಿದೆ ಎಂದು ಅಭಿಪ್ರಾಯಪಡಲಾಗಿದೆ.ಈತನ ವಿರುದ್ಧ ಈ ಹಿಂದೆ ಹಲವು ಬಾರಿ ಬಂಧನ, ಮುಂಜಾಗ್ರತಾ ಕ್ರಮಗಳು ಹಾಗೂ ರೌಡಿ ಹಾಳೆ ನಿರ್ವಹಣೆ ಸೇರಿದಂತೆ ವಿವಿಧ ಕಾನೂನು ಕ್ರಮಗಳನ್ನು ಕೈಗೊಂಡಿದ್ದರೂ ಅಪರಾಧ ಚಟುವಟಿಕೆಗಳು ಮುಂದುವರಿದಿವೆ. ಜಾಮೀನು ಷರತ್ತುಗಳನ್ನು ಉಲ್ಲಂಘಿಸಿ ಸ್ವಂತ ಗ್ಯಾಂಗ್ ಕಟ್ಟಿಕೊಂಡು ಸಂಘಟಿತವಾಗಿ ಅಪರಾಧ ಕೃತ್ಯಗಳಲ್ಲಿ ತೊಡಗಿರುವುದರಿಂದ ಸಾಮಾನ್ಯ ಕಾನೂನು ಕ್ರಮಗಳಿಂದ ನಿಯಂತ್ರಿಸಲು ಸಾಧ್ಯವಾಗುತ್ತಿಲ್ಲ ಎಂದು ಜಿಲ್ಲಾಡಳಿತ ಸರ್ಕಾರಕ್ಕೆ ಸಲ್ಲಿಸಿದ ವರದಿಯಲ್ಲಿ ತಿಳಿಸಿದೆ.

ಸಾರ್ವಜನಿಕ ಸುವ್ಯವಸ್ಥೆ ಕಾಪಾಡುವ ಮತ್ತು ಅಪರಾಧ ಚಟುವಟಿಕೆಗಳಿಗೆ ಕಡಿವಾಣ ಹಾಕುವ ಉದ್ದೇಶದಿಂದ ಗೂಂಡಾ ಕಾಯ್ದೆಯಡಿ ಬಂಧನ ಮುಂದುವರಿಸುವುದು ಅಗತ್ಯವೆಂದು ಸರ್ಕಾರ ನಿರ್ಧರಿಸಿದೆ. ಸದ್ಯ ಮಾಳಪ್ಪ ದೇವಕತೆ ಮಂಗಳೂರು ಕಾರಾಗೃಹದಲ್ಲಿ ಬಂಧನದಲ್ಲಿದ್ದಾನೆ.

ರಾಜ್ಯ ಉಪಾಧ್ಯಕ್ಷರಾಗಿ ರಾವಸಾಬ ಐಹೊಳೆ ನೇಮಕ

■ ಉದಯರಶ್ಮಿ ದಿನಪತ್ರಿಕೆ



ಅಥಣಿ: ರಾಜಕೀಯ, ಸಾಮಾಜಿಕ ಹಾಗೂ ಉದ್ಯಮ ಕ್ಷೇತ್ರಗಳಲ್ಲಿ ತಮ್ಮದೇ ಆದ ಛಾಪು ಮೂಡಿಸಿರುವ ಅಥ–ಣಿಯ ಯುವ ನಾಯಕ, ಉದ್ಯಮಿ ಹಾಗೂ ಸಮಾಜಸೇವಕ ರಾವಸಾಬ ಐಹೊಳೆ ಅವರಿಗೆ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಪರಿಶಿಷ್ಟ ಜಾತಿ ವಿಭಾಗದ ರಾಜ್ಯ ಉಪಾಧ್ಯಕ್ಷರನ್ನಾಗಿ ನೇಮಕ ಮಾಡಿರುವುದು ಅಥಣಿ ತಾಲೂಕು ಸೇರಿದಂತೆ ಜಿಲ್ಲೆಯ ಕಾಂಗ್ರೆಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಯುವ ಸಮುದಾಯದಲ್ಲಿ ಸಂತಸ ಮತ್ತು ಹೊಸ ನಿರೀಕ್ಷೆ ಮೂಡಿಸಿದೆ.

ಎಐಸಿಸಿ ಪರಿಶಿಷ್ಟ ಜಾತಿ ವಿಭಾಗದ ರಾಷ್ಟ್ರೀಯ ಅಧ್ಯಕ್ಷ ರಾಜೇಂದ್ರಪಾಲ್ ಗೌತಮ ಅವರ ಮಾರ್ಗದರ್ಶನ ಹಾಗೂ ಆದೇಶದ ಮೇರೆಗೆ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಬಿ.ಕೆ. ಹರಿಪ್ರಸಾದ ಅವರ ಅನುಮೋದನೆಯೊಂದಿಗೆ ಈ ನೇಮಕಾತಿ ಮಾಡಲಾಗಿದೆ.

ಪೌರಕಾರ್ಮಿಕರಿಗೆ ಬಟ್ಟೆ ಹಾಗೂ ಸಿಹಿ ವಿತರಣೆ

■ ಉದಯರಶ್ಮಿ ದಿನಪತ್ರಿಕೆ

ದೀಪಾವಳಿ ಹಬ್ಬದ ಪ್ರಯುಕ್ತ ಬುರಾಣಪುರ ಕುಟುಂಬದಿಂದ ಪ್ರತಿವರ್ಷ ಈ ಸಮಾಜಸೇವೆ

ವಿಜಯಪುರ: ನಗರದ ಪೂಜಾ ಪ್ರಿಂಟರ್ಸ್ ಮಾಲೀಕ ಶ್ರೀಮತಿ ಅಂಬಿಕಾ ಚಂದ್ರಶೇಖರ ಬುರಾಣಪುರ ಹಾಗೂ ಪೂಜಾ ಚಂದ್ರಶೇಖರ ಬುರಾಣಪುರ ಅವರ ಕುಟುಂಬದ ವತಿಯಿಂದ ಪ್ರತಿವರ್ಷ ದೀಪಾವಳಿ ಹಬ್ಬದ ಪ್ರಯುಕ್ತ ಪೌರಕಾರ್ಮಿಕ ಸಿಬ್ಬಂದಿಗೆ ಬಟ್ಟೆ ಹಾಗೂ ಸಿಹಿ ವಿತರಿಸುವ ಕಾರ್ಯಕ್ರಮವನ್ನು ಕಳೆದ ಒಂದು ದಶಕದಿಂದ ನಿರಂತರ ಹಮ್ಮಿಕೊಳ್ಳುತ್ತಾ ಬರಲಾಗಿದೆ.

ನಗರದ ಸ್ವಚ್ಛತೆ ಹಾಗೂ ನೈರ್ಮಲ್ಯ ಕಾಪಾಡುವಲ್ಲಿ ಹಗಲಿರುಳು ಶ್ರಮಿಸುತ್ತಿರುವ ಪೌರಕಾರ್ಮಿಕರ ಸೇವೆಯನ್ನು ಗೌರವಿಸುವ ಹಾಗೂ ಅವರೊಂದಿಗೆ ದೀಪಾವಳಿ ಹಬ್ಬದ ಸಂತೋಷವನ್ನು ಹಂಚಿಕೊಳ್ಳುವ ಉದ್ದೇಶದಿಂದ ಬುರಾಣಪುರ ಕುಟುಂಬದವರು ಪ್ರತಿವರ್ಷ ಈ ಸಮಾಜಮುಖಿ ಕಾರ್ಯವನ್ನು ಮಾಡಿಕೊಂಡು ಬರುತ್ತಿದ್ದಾರೆ. ಈ ಸಂದರ್ಭದಲ್ಲಿ ಗ್ರಾಮೀಣ ಮತ್ತು ಚಿಕ್ಕ ಉದ್ಯಮ ಇಲಾಖೆಯ ಉಪನಿರ್ದೇಶಕ ಎಸ್.ಎಂ. ಪಾಟೀಲ, ಚಂದ್ರಶೇಖರ ಬುರಾಣಪುರ ಕುಟುಂಬದವರು, ಸುರೇಶ್ ಕೊಂಡಗೂಳಿ ಹಾಗೂ ಪೌರಕಾರ್ಮಿಕ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

ಪ್ರಾಯೋಗಿಕ ಕೌಶಲ ಬೆಳೆಸಿಕೊಂಡರೆ ಉದ್ಯೋಗಾವಕಾಶ ಹೆಚ್ಚಳ

■ ಉದಯರಶ್ಮಿ ದಿನಪತ್ರಿಕೆ



ಮಹಿಳಾ ವಿಶ್ವವಿದ್ಯಾಲಯದ ಕಲಾ ನಿಕಾಯದ ಸ್ನಾತಕ ವಿಭಾಗದ ಸಂಯೋಜಕ ಡಾ. ಅಕ್ಷಯ ಯಾರ್ದಿ ಸಲಹೆ

ವಿಜಯಪುರ: ಶಿಕ್ಷಣದ ಜೊತೆಗೆ ಸಂವಹನ, ಮಾತುಗಾರಿಕೆ ಹಾಗೂ ನಿರೂಪಣೆಯಂತಹ ಪ್ರಾಯೋಗಿಕ ಕೌಶಲಗಳನ್ನು ಬೆಳೆಸಿಕೊಂಡರೆ ಉದ್ಯೋಗ ಮತ್ತು ಸ್ವಯಂ ಉದ್ಯೋಗಕ್ಕೆ ಹೆಚ್ಚಿನ ಅವಕಾಶಗಳು ದೊರೆಯಲಿವೆ ಎಂದು ಮಹಿಳಾ ವಿಶ್ವವಿದ್ಯಾಲಯದ ಕಲಾ ನಿಕಾಯದ ಸ್ನಾತಕ ವಿಭಾಗದ ಸಂಯೋಜಕ ಡಾ. ಅಕ್ಷಯ ಯಾರ್ದಿ ಹೇಳಿದರು.

ನಗರದ ಕರ್ನಾಟಕ ರಾಜ್ಯ ಅಕ್ಕಮಹಾದೇವಿ ಮಹಿಳಾ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ವತಿಯಿಂದ ಸ್ನಾತಕ ವಿದ್ಯಾರ್ಥಿನಿಯ–ರಿಗಾಗಿ ಶುಕ್ರವಾರ ಹಮ್ಮಿಕೊಂಡಿದ್ದ ಒಂದು ದಿನದ ಟೆಲಿವಿಷನ್ ನಿರೂಪಣೆ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿನಿಯರು ಕೇವಲ ಪದವಿ ಪಡೆಯುವುದಕ್ಕೆ ಸೀಮಿತವಾಗದೆ, ಸಂವಹನ ಕೌಶಲ, ಮಾತುಗಾ–ರಿಕೆ, ಸುದ್ದಿ ನಿರೂಪಣೆ ಹಾಗೂ ವರದಿಗಾರಿಕೆಯಂತಹ ಪ್ರಾಯೋಗಿಕ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಇಂದಿನ ದಿನಗಳಲ್ಲಿ ಯೂಟ್ಯೂಬ್, ಪಾಡ್‌ಕಾಸ್ಟ್ ಹಾಗೂ ಸ್ವಂತ ಮಾಧ್ಯಮ ವೇದಿಕೆಗಳ ಮೂಲಕ ಸ್ವಯಂ ಉದ್ಯೋಗ ಸೃಷ್ಟಿಸಿಕೊಳ್ಳಲು ಉತ್ತಮ ಅವಕಾಶಗಳಿವೆ. ವಿಶ್ವವಿದ್ಯಾಲಯದಲ್ಲಿರುವ ಸುಸಜ್ಜಿತ ಸ್ಟುಡಿಯೋ ಸೌಲಭ್ಯವನ್ನು ಸಮರ್ಪಕವಾಗಿ ಬಳಸಿಕೊಂಡು ಇಂತಹ ಕಾರ್ಯಾಗಾರಗಳ ಮೂಲಕ ಪ್ರಾಯೋಗಿಕ ಜ್ಞಾನ ಪಡೆದುಕೊಳ್ಳಬೇಕು ಎಂದರು.

ಸ್ನಾತಕ ವಿಭಾಗದ ವಾಣಿಜ್ಯ ನಿಕಾಯದ ಸಂಯೋಜಕ ಡಾ. ಗಣೇಶ್ ಎ.ಆರ್. ಮಾತನಾಡಿ, ಕೃತಕ ಬುದ್ಧಿಮತ್ತೆ ತಂತ್ರಜ್ಞಾನ ವೇಗವಾಗಿ ಬೆಳೆಯುತ್ತಿದ್ದರೂ ಮಾನವೀಯ ಭಾವನೆಗಳು ಹಾಗೂ ಸಂದರ್ಭಕ್ಕೆ ತಕ್ಕಂತೆ ಸ್ಪಂದಿಸುವ ಸಾಮರ್ಥ–್ಯವನ್ನು ತಂತ್ರಜ್ಞಾನ ಸಂಪೂರ್ಣವಾಗಿ ಒದಗಿಸಲು ಸಾಧ್ಯವಿಲ್ಲ. ನಿರೂಪಣೆಯಲ್ಲಿ ಕೇವಲ ಸ್ಕ್ರಿಪ್ಟ್ ಓದುವುದಷ್ಟೇ ಮುಖ್ಯವಲ್ಲ. ಅನಿರೀಕ್ಷಿತ ಸಂದರ್ಭಗಳನ್ನು ಸಮರ್ಥ–್ಯವಾಗಿ ನಿಭಾಯಿಸುವ ಕೌಶಲವೂ ಅಗತ್ಯ. ವಿದ್ಯಾರ್ಥಿನಿಯರು ಉತ್ತಮ ಸಂವಹನ, ಮಾತುಗಾರಿಕೆ ಹಾಗೂ ನಿರೂಪಣಾ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಇಂತಹ ಕಾರ್ಯಾಗಾರಗಳು ಪ್ರಾಯೋಗಿಕ ಜ್ಞಾನ ಪಡೆಯಲು ಉತ್ತಮ ವೇದಿಕೆಯಾಗಿದ್ದು, ವಿದ್ಯಾರ್ಥಿನಿಯರು ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ತಿಳಿಸಿದರು.

ಕಾರ್ಯಾಗಾರದ ಅಧ್ಯಕ್ಷತೆ ವಹಿಸಿದ್ದ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಡಾ. ತಹಮೀನ ಕೋಲಾರ್ ಮಾತನಾಡಿ, ನಿರೂಪಣೆಗೆ ಕೇವಲ ವಿಷಯ ಜ್ಞಾನವಿದ್ದರೆ ಸಾಲದು. ಆತ್ಮವಿಶ್ವಾಸ, ಭಾವನೆಗಳ ಅಭಿವ್ಯಕ್ತಿ ಹಾಗೂ ದೇಹಭಾಷೆಯೂ ಪ್ರಮುಖ ಪಾತ್ರ ವಹಿಸುತ್ತವೆ. ವಿದ್ಯಾರ್ಥಿನಿಯರು ತಮ್ಮಲ್ಲಿರುವ ಜ್ಞಾನವನ್ನು ಪರಿಣಾಮಕಾ–ರಿಯಾಗಿ ಪ್ರಸ್ತುತಪಡಿಸುವ ಕೌಶಲ ಬೆಳೆಸಿಕೊಳ್ಳಬೇಕು. ಕಾರ್ಯಾಗಾರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಸ್ಟುಡಿಯೋದಲ್ಲಿ ಪ್ರಾಯೋಗಿಕ ತರಬೇತಿ ಪಡೆಯುವ ಮೂಲಕ ತಮ್ಮ ಸಾಮರ್ಥ–್ಯವನ್ನು ಹೆಚ್ಚಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸ್ನಾತಕ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿನಿಯರು, ಅತಿಥಿ ಉಪನ್ಯಾಸಕರು, ಸಂಶೋಧನಾ ವಿದ್ಯಾರ್ಥಿನಿಯರು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಉಪಸ್ಥಿತ–ರಿದ್ದರು.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ. ಸಂದೀಪ್ ಸ್ವಾಗತಿಸಿ, ಪ್ರಾಸ್ತಾವಿಕ ನುಡಿಗಳನ್ನಾಡಿದರು. ಸಂಶೋಧನಾ ವಿದ್ಯಾರ್ಥಿನಿಯರಾದ ಪವಿತ್ರಾ ಕಂಬಾರ ವಂದಿಸಿದರು, ಜಯಶ್ರೀ ತಳವಾರ ನಿರೂಪಿಸಿದರು.

Printed by: AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR